ವಿನ್ಯಾಸ ಮತ್ತು ಉದ್ದೇಶಗಳಿಲ್ಲದೆ ನಾವು ಏನನ್ನೂ ಸೃಜಿಸಲು ಸಾಧ್ಯವಿಲ್ಲ. ಅರ್ಥವತ್ತಾಗಿರುವುದು ಅಂದರೆ ಸಾಮಾನ್ಯವಾದ ಪದವಲ್ಲ. ನೈಸರ್ಗಿಕ ಜಗತ್ತಿನ ಪ್ರತಿಯೊಂದು ಚಲನೆಗೂ ಒಂದೊಂದು ಅರ್ಥವಿರುತ್ತದೆ. ಅರ್ಥವಿದ್ದಾಗ ಮಾತ್ರ ನಮಗೆ ಅದರ ಮೌಲ್ಯ ಅರಿತು, ಗೌರವ ಹೆಚ್ಚಾಗುತ್ತದೆ, ಹತ್ತಿರದವಾಗುತ್ತವೆ. ಹಾಗೆಯೇ ಯಾವುದಾದರೊಂದು 'ಉತ್ಪನ್ನ'ದ ಮಾರುಕಟ್ಟೆಯೆಂದರೆ ಅದರ ಹಿಂದೆ ಎಷ್ಟು ಜನರ ಶ್ರಮ, ಕನಸು ಮತ್ತು ಭವಿಷ್ಯವಿರುತ್ತದೆ. ಅಂತಹ ಉತ್ಪನ್ನವೊಂದನ್ನು ಜಗತ್ತಿಗೆ ಪರಿಚಯಿಸಬೇಕಾದರೆ ಎಚ್ಚರ, ತಂತ್ರಗಾರಿಕೆ, ಸೂಕ್ಷ್ಮತೆ ಮತ್ತು ಸೃಜನಶೀಲತೆಯನ್ನು ಹೊಂದಿರುವ ಪರಿಕಲ್ಪನೆ ಇದ್ದರೆ ಜನ ಅದನ್ನು ಖಂಡಿತವಾಗಿಯೂ ಪ್ರಯತ್ನಿಸಲು ಇಷ್ಟಪಡುತ್ತಾರೆ. ಹಾಗಾಗಿ ಜಾಹೀರಾತು ಮಾತ್ರವೇ ಅಲ್ಲ, ಯಾವುದೆ ಕಲಾ ಪ್ರಕಾರದಲ್ಲಿ 'ಸೃಜನಶೀಲ ಪರಿಕಲ್ಪನೆ ಸೃಷ್ಟಿ' ಅತ್ಯಂತ ಮಹತ್ವದ ಸಂಗತಿಗಳಲ್ಲೊಂದಾಗಿದೆ.

### ಗ್ರಂಥಸೂಚಿ :


೧. ಆಣಊಟಚಿದ ಐಚಿಞಣ , (ಓಡಿಚಿಟಿಬಿ ೨೦೧೧), ೦ ಖಿಚಿಊಡಿಚಿಊಚಿಟ ಚಿರಿರಿಡಿಡಚಿಟು ಣಂ ಟಿಜ ಛಿಯಛಿಜೋಣ ಡಜಿ ಚಿಜತಡಿಣಟಿಚಿಂ ಚಿ ಒಚಿಡಿಞಚಿಟಿಂ ಊಚ್ಚಿಚಿಟ ಏಚಿಟಧಿಯಲಣ ಗಟಿಚಿಡಿಣಿಂಧಿ

೨. ಖಚಿಣಾಣಾ ಊ. ಖಡಜಣಾಟಚಿ, ಖಡಿಚಿಟಣಂ ೦ಟಚಿಞಚಿಟಜಡಿಥ ಕುಚಿಞಧಿಚಿಟಟಚಿಇು ಇಟಚಿಟಣಚಿಟಚಿ, (ಎಣಟಜ ೨೦೧೦), ಅಡಿಚಿಣಟಿಣಾಧಿ ಚಿ ಖಚಿಟಚಿಟ ೦ಜತಡಿಣಟಿಂ : ಆಚಿಟಡಯಿಟಿಂ ಚಿ ಅಯಛಿಜೋಣಚಿಟ ಈಡಿಚಿಟಚಿತಿಯಾ, ಗಟಿಚಿಡಿಣಿಂಧಿ ಡಜಿ ಒಚಿಛಿಜಚಿಡಯಚಿ, ಗಟಿಚಿಡಿಣಿಂಧಿ ಡಜಿ ೧ಚಿಟಟಚಿ.

೩. ೖಣಣಠಿ://ಚಿಜಚಿಛಿಚಿಜಂಛಿಯ/ಟಿಯ/ಛಿಡಿಚಿಣಟಿ-ಚಿಜತಡಿಣಟಿಂ-ಣಜಚಿಧಿ/

೪. ೖಣಣಠಿ://ಚಿ.ತಿಞಛಿಜಚಿ.ಡಿಡ/ತಿಞ/ಕಡಿಟಜ_ಡಜಿ_ಛಿಯಛಿಜೋಣ_ಜಿಡಿಟಚಿಣಟ

೫. ೖಣಣಠಿ://ತಿತಿತಿ.ಡಚಿಟಜಛಿಯ/ಚಿಡಿಟ?ಡ=ತಿಡಿಚಿಡಿಚಿಟಂ+ಟಚಿಟಂ&ಡ=ಷಡಿಚಿಡಿಚಿಟಂ&ಚಿಢ=ಟಡಿಡಜ೨.೬೯೫೭೭೭೦೭೯ಟ ೯.೧೪೫೪೭೦೭೧೫&ಡಾಡಛಿಜಚಿ=ಟಡಿಡಚಿ&ಜ=ಗಟಿಈ–೮

**Shikshan Sanshodhan : Journal of Arts, Humanities and Social Sciences** ISSN: 2581-6241
Monthly, Peer-Reviewed, Refereed, Indexed Journal Impact Factor: 5.146
Volume - 5, Special Issue - 4, July - 2022 Publication Date: 31/07/2022

DOIs:10.2018/SS/ NCMRTRI002 --:-- Research Paper / Article

# ಆನ್‌ಲೈನ್ ಸುದ್ದಿ ಪೋರ್ಟಲ್‌ಗಳ ಸುದ್ದಿ ಹಂಚಿಕೆಯ ಪ್ರಭಾವದ ಕುರಿತು ಒಂದು ಸಂಕ್ಷಿಪ್ತ

**ಮಹಾಲಕ್ಷ್ಮೀ. ಮ. ಭೂಶಿ**
ಸಂಶೋಧನಾ ವಿದ್ಯಾರ್ಥಿನಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ

**ಡಾ. ಶಿವಕುಮಾರ ಕಣಸೋಗಿ**
ಸಂಶೋಧನಾ ಮಾರ್ಗದರ್ಶಕರು ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ

**ಂಛಾಾಡಿಚಿಛಣ:** ಪ್ರಸಕ್ತ ದಿನಗಳಲ್ಲಿ ಅತೀ ಹೆಚ್ಚು ಜನಪ್ರಿಯತೆ ಪಡೆದುಕೊಂಡಂತಹ **ಆನ್‌ಲೈನ್** ಸುದ್ದಿ ಪೋರ್ಟಲ್‌ಗಳು ಲಕ್ಷಾಂತರ ಜನರ ಗಮನವನ್ನು ಮತ್ತು ಕಲ್ಪನೆಯನ್ನು ಪ್ರತ್ಯೇಕವಾಗಿ ಸಮಾನ ವಯಸ್ಕರ ಸಹಕೂಟದ ಭಾಗವಾಗಿ ಸೆರೆಹಿಡಿದಿವೆ. ಸಂವಹನ ಮತ್ತು ಸಂಪರ್ಕದ ಮಾಧ್ಯಮವಾಗಿ ಜನರನ್ನು ಆಪ್ತತೆಯೊಂದಿಗೆ ಬೆಸೆಯುವುದರ ಜೊತೆಗೆ ಅಭಿವೃದ್ಧಿಗೊಳಿಸಿದೆ ಎಂದರೇ ಅದಕ್ಕೆ ಕಾರಣ ವಿವಿಧ ಸಾಮಾಜಿಕ ಪ್ಲಾಟ್‌ಫಾಮಗಳಲ್ಲಿನ ಆನ್‌ಲೈನ್ ಸುದ್ದಿ ಹಂಚಿಕೆಯಾಗಿದೆ. ಇದು ಸಂವಹನದ ವೈಯಕ್ತಿಕ ಭಾಗವಾಗದೇ ಸಾರ್ವಜನಿಕರ ಒಮ್ಮತವಾಗಿ ಸುದ್ದಿಯನ್ನು ಸಹ ಜನಪ್ರಿಯತೆಗೊಳಸುತ್ತದೆ. ಈ ಸಂಶೋಧನೆಯು ಸುದ್ದಿ ಹಂಚಿಕೆ ಮತ್ತು **ಆನ್‌ಲೈನ್** ಸುದ್ದಿ ಪೋರ್ಟಲ್‌ಗಳ ನಡುವಿನ ಅವಿನಾಭಾವ ಸಂಬಂಧವನ್ನು ತಿಳಸುತ್ತದೆ. ಸುದ್ದಿ ಹಂಚಿಕೆಯ ಎಂಬ ಪರಿಕಲ್ಪನೆ ಸೃಜನಶೀಲತೆಯ ಕ್ರಿಯಾತ್ಮಕದ ಪ್ರಕ್ರಿಯೆಯಾಗಿದೆ ಹಾಗೂ ಪುನರ್‌ವಿತರಣೆಯ ಒಂದು ವ್ಯಾಪಕ ರೂಪವನ್ನು ಪ್ರದರ್ಶಿಸುವುದಲ್ಲದೇ, ಸಕಾರಾತ್ಮಕ ಪ್ರಚಾರದ ಒಂದು ಭಾಗವಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತದೆ. **ಆನ್‌ಲೈನ್** ಸುದ್ದಿ ಹಂಚಿಕೆಯಲ್ಲಿ ಯಾವ ವರದಿಗಳು ಜನರಿಗೆ ಅವಶ್ಯವಿದ್ದು ಮತ್ತು ಯಾವ ವರದಿ ಪ್ರಕಟಣೆಗೆ ಸೂಕ್ತವಾಗಿದೆ. ಎಂಬುವುದರ ನಿರ್ಧಾರಿಸುವಿಕೆ ಇಂದು ಪತ್ರಕರ್ತರಿಗೆ ಜಟಿಲವೆನಿಸುವಷ್ಟು **ಆನ್‌ಲೈನ್** ಪೋರ್ಟಲ್‌ಗಳು ಕಣಕ್ಕಿಳದುಬಿಟ್ಟಿವೆ. ಅದರಿಂದ ಇಲ್ಲಿ ಸುದ್ದಿ ಹಂಚಿಕೆಯು ಬಹು ಪ್ರಾಮುಖ್ಯತೆ ಪಡೆಯುತ್ತದೆ. **ಆನ್‌ಲೈನ್** ಸುದ್ದಿ ಪೋರ್ಟಲ್‌ಗಳಲ್ಲಿ ಪ್ರಕಟವಾಗುವ ಸುದ್ದಿಗಳು ಛಾಯಾಚಿತ್ರಗಳು, ಸುದ್ದಿಯ ತಲೆಬರಹಗಳು, ಸುದ್ದಿಯ ಶೈಲಿ ಇತ್ಯಾದಿ ಅಂಶಗಳ ಸರಳತೆಯು ಬಳಕೆದಾರರ ಮೇಲೆ ಹೇಗೆ ಪ್ರಭಾವ ಬೀರಿ ಹಂಚಿಕೆಯಾಗುತ್ತದೆ ಎಂಬುವುದು ಮುಖ್ಯವಾಗಿದೆ. **ಆನ್‌ಲೈನ್** ಪೋರ್ಟಲ್‌ಗಳ ಸುದ್ದಿ ಪ್ರಸಾರದ ಮಧ್ಯವರ್ತಿಗಳಾದ– ಸುದ್ದಿ ಅಪ್ಲಿಕೇಷನ್‌ಗಳು, ಲಿಂಕ್, ಚಾರ್ಟಬೀಟ್, ಷೇರ್‌ಚಾಟ್ ಇವುಗಳ ಮುಖೇನ ಸುದ್ದಿ ಉತ್ಪಾದನೆಯ ವರದಿಗಳನ್ನು ಓದುಗರಿಗೆ ತಲುಪಿಸುವಿಕೆಯಲ್ಲಿ ಯಾವ ರೀತಿ ಸಹಾಯವಾಗುತ್ತದೆ ಮತ್ತು ಅವುಗಳು ಯಾವ ರೀತಿ ಪಾತ್ರವಹಿಸುತ್ತವೆ ಎಂಬ ವಿಶ್ಲೇಷಣೆಯ ಮಹತ್ವವನ್ನು ಈ ಸಂಶೋಧನೆಯು ವ್ಯಕ್ತಪಡಿಸುತ್ತದೆ.

**ಏಜಫಿ ಫಡಿಜ:** ಆನ್‌ಲೈನ್ ಸುದ್ದಿ ಪೋರ್ಟಲ್‌ಗಳು, ಸುದ್ದಿಹಂಚಿಕೆದಾರರು ಮತ್ತು ಓದುಗ ಬಳಕೆದಾರರು,ಮತ್ತು ನೆಟ್‌ವರ್ಕ್ ಜಾಲತಾಣಗಳು.

**ಪೀಠಿಕೆ :**

ಇಂದಿನ ಸುದ್ದಿ ಪೋರ್ಟಲ್‌ಗಳು ಸುದ್ದಿ ಹಂಚಿಕೆಗಾಗಿ ಹಲಾವಾರು ಆನ್‌ಲೈನ್ ವೇದಿಕೆಗಳನ್ನು ಬಳಸಿಕೊಳ್ಳುತ್ತಿವೆ. ಕಾರಣ ಸುದ್ದಿ ಮಾಹಿತಿಯನ್ನು ಒದಗಿಸಲು ಅಸಂಖ್ಯಾತ ಜನರನ್ನು ಶೀಘ್ರ ಪ್ರಸಾರದೊಂದಿಗೆ ತಲುಪಲು ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ಟ್ವಿಟ್ಟರ್, ಷೇರ್‌ಚಾಟ್, ಮುಂತಾದ ಇನ್ನಿತರ ಸುದ್ದಿತಾಣಗಳನ್ನು ಮತ್ತು ಇತರೆ ಮಾಧ್ಯಮಗಳನ್ನು ಬಳಸಿಕೊಂಡು ಸಮಾಜದಲ್ಲಿ ಜೀವಿಸುತ್ತಿರುವ ಕೊನೆಯ ವರ್ಗದ ವ್ಯಕ್ತಿಗೂ ಕೂಡಾ ಸುದ್ದಿ ತಲುಪುವಂತೆ ಮಾಡುವುದು ಇದರ ಉದ್ದೇಶವಾಗಿದೆ. ಅಂತರ್ಜಾಲದ ಅರ್ಧಶಃ ಭಾಗವಾಗಿ ಇಂದು ಮಾಧ್ಯಮಗಳು ಕಾರ್ಯನಿರ್ವಹಿಸುತ್ತಿದ್ದುದ್ದರಿಂದ ಇದರ ಹೊರತಾಗಿ ಎಲ್ಲವೂ ಅಸಾಧ್ಯ ಎಂಬುವಂತೆ ಇಂದು ಮಾಧ್ಯಮಗಳ ವೈಖರಿಯ ಅವಲಂಬನೆಯು ಹೆಚ್ಚಿದೆ. ಆನ್‌ಲೈನ್ ಸುದ್ದಿ ಪೋರ್ಟಲ್‌ಗಳು ತನ್ನ ಸುತ್ತಮುತ್ತಲೂ ನಡೆದಿರುವ ಸುದ್ದಿ ಮಾಹಿತಿಯ ಘಟನಾವಳಗಳನ್ನು ತನ್ನ ಪೋರ್ಟಲ್‌ನ ಖಾತೆಗೆ ಹಂಚಿಕೊಳ್ಳುತ್ತದೆ. ಇದು ಮುಕ್ತವಾಗಿ ಸಾರ್ವಜನಿಕ ಗೋಚರತೆ ಹೊಂದಿರುವುದರಿಂದ ಬಳಕೆದಾರರಿಗೆ ಸುದ್ದಿ ಗ್ರಹಿಕೆಯು ಸರಳವಾಗಿದೆ. ಗ್ರಹಿಕೆ ಮಾತ್ರ ಸಾಲದು ಎಂದು ತಾಂತ್ರಿಕ ಮತ್ತು ತಂತ್ರದ ಸಮ್ಮಿಲನದೊಂದಿಗೆ ಸುದ್ದಿ ಹಂಚಿಕೆಗೆ ಸುಲಭವಾದ ಆಯ್ಕೆ ನೀಡಿ, ಇದನ್ನು ಸುದ್ದಿ ಅಪ್ಲಿಕೇಷನ್ ಹೊಂದಿಲ್ಲದವರು ಸಹ ಸಮಾಜಿಕ+ ನವ+ ಡಿಜಿಟಲ್ ಮಾಧ್ಯಮಗಳ ಮೂಲಕ ಸುದ್ದಿಯನ್ನು ಹಂಚಿಕೆ ಮಾಡಿ ಅದನ್ನು ಪ್ರತ್ಯೇಕ ಮತ್ತು ಪರೋಕ್ಷವಾಗಿ ಗ್ರಹಿಸುವಂತೆ ಮಾಡಿದರು. ಸುದ್ದಿ ಹಂಚಿಕೆಯು ಸರಳೋಪಯವಾಗಿ ಸಾಮಾಜಿಕವಾಗಿ ಬಳಕೆದಾರರರಿಗೆ ಸುದ್ದಿಯನ್ನು ಒದಗಿಸಲು ಡಿಜಿಟಲ್ ತಂತ್ರಜ್ಞಾನ ವಿಭಿನ್ನ ಆಯ್ಕೆಗಳನ್ನು ನೀಡಿದೆ. ಉದಾಹರಣೆಗೆ ಸುದ್ದಿ ಹಂಚಿಕೆ ಗುಂಡಿ (ಸರ್ಚ್ ಇಂಜಿನ್) ರೀಪೋಸ್ಟ್ ಮಾಡುವುದು, ಲಿಂಕ್‌ಗಳನ್ನು ಒದಗಿಸುವಿಕೆ ಫೀಡ್‌ಮಾಡುವುದು ಮುಂತಾದವುಗಳು ಆಯ್ಕೆಯು ಸುದ್ದಿ ಹಂಚಿಕೆ ಓದುಗರ ಓದುವಿನ ಶೈಲಿಯನ್ನು ಬದಲಿಸುವುದರ ಜೊತೆಗೆ ಹೆಚ್ಚು ಜನರನ್ನು ತಲುಪುವಂತೆ ಹಾಗೂ ಅವರವರ ಅಭಿಪ್ರಾಯಗಳನ್ನು ಹೊರಹೊಮ್ಮಿಸುವಂತೆ ಮಾಡುತ್ತದೆ. ಅವರವರ ಸಮಾನ ವಯಸ್ಕರಿಗೆ ಹೊಂದಿಕೊಂಡಂತೆ ಇಂದು ಪ್ರೇಕ್ಷಕರು ಸುದ್ದಿಗಳ ಒಡನಾಟದೊಂದಿಗೆ ತೊಡಗಿಕೊಂಡಿದ್ದಾರೆ. ಯಾಕೆಂದರೆ ಇಂದು ನೂರಕ್ಕೆ ಅರವತ್ತೆಂಟು ಅಂತರ್ಜಾಲದ ಸುದ್ದಿ ಓದುಗರು ಇದ್ದಾರೆ "ಜೋಸೆಫ್ ಎಸ್" ಅವರು ನಡೆಸಿದ ಅಧ್ಯಯನದ ಸಮೀಕ್ಷೆಯಲ್ಲಿ ಕಂಡು ಬಂದಿದೆ. ಸುದ್ದಿ ಪೋರ್ಟಲ್‌ಗಳಲ್ಲಿ ಓದುಗರು ಸುದ್ದಿ ಓದುವಲ್ಲಿ ಸ್ವತಂತ್ರವಾಗಿದ್ದರಿಂದ ಸುದ್ದಿ ಹಂಚಿಕೆಯ ನಡಾವಳ

ಅವರ ಆಪ್ತತೆಯ ಒಳಗೊಳ್ಳುವಿಕೆಯನ್ನು ಹೆಚ್ಚಿಸಿದ್ದು ಅದರೊಟ್ಟಿಗೆ ಇದು ಅವರ ಒಂದು ಗುಂಪನ್ನು ನಿದರ್ಶಿಸುತ್ತದೆ. ಉದಾಹರಣೆಗೆ: ಕ್ರೀಡಾಕೂಟ, ಫ್ಯಾಷನ್, ಅಪರಾಧ ಹೀಗೆ ತರೇಹವಾರಿ ಸುದ್ದಿಗಳ ಗುಂಪಾಗಿದೆ. ಸುದ್ದಿ ಹಂಚಿಕೆಯ ಚಟುವಟಿಕೆಗಳು ವೀಕ್ಷಣೆಗೆ ಕಾರಣವಾಗುತ್ತದೆ. ಪೋರ್ಟಲ್‌ಗಳು ಪಾರದರ್ಶಕತೆ ಹೊಂದಿರುವುದರಿಂದ ಸುದ್ದಿ ಹಂಚಿಕೆಯ ಅಂಕಿ ಸಂಖ್ಯೆಗಳನ್ನು ಸ್ಪಷ್ಟಪಡಿಸುತ್ತದೆ. ಸುದ್ದಿಯು ನಿಖರವಾಗಿದೆ ಎಂಬುವುದು ಅದರ ಹಂಚಿಕೆಯ ಸಂಖ್ಯೆಯ ಮೇಲೆ ಕೇಂದ್ರಿಕರಿಸುತ್ತದೆ. ಏಕೆಂದರೆ ಪೋರ್ಟಲ್‌ಗಳ ಆದಾಯವು ಸುದ್ದಿ ಹಂಚಿಕೆ ಮತ್ತು ಬಳಕೆದಾರರ ಮೇಲೂ ಅವಲಂಬಿತವಾಗಿದೆ. ಮತ್ತು ಸುದ್ದಿ ವೈವಿಧ್ಯತೆಗಳ ಪ್ರಸಾರದ ಸೀಮಿತ ಮಾನ್ಯತೆಯನ್ನು ಹೊಂದಿದೆ, ಯಾಕೆಂದರೆ ಸುದ್ದಿ ಹಂಚಿಕೆಯು ಮುಖ್ಯವಾಗಿ ಸುದ್ದಿಯ ವಿತರಣೆಯ ಹೊರಹೊಮ್ಮುವಿಕೆಗೆ ಅವಕಾಶ ಮಾಡಿಕೊಟ್ಟಿದೆ.

**ಸಾಹಿತ್ಯ ವಿಮರ್ಶೆ;**

" ಕ್ಯಾಪ್ಲಾನ್ (೨೦೧೮)" ; ಸುದ್ದಿ ಸಂಸ್ಥೆಗಳು ಸುದ್ದಿ ಹಂಚಿಕೆಯನ್ನು ಮಾಡಲು ಓದುಗರಿಗೆ ಆಯ್ಕೆಗಳ ಜೊತೆಗೆ ಇತರೆ ಸಾಮಾಜಿಕ ಮಾಧ್ಯಮಗಳನ್ನು ಒದಗಿಸಿವೆ. ಮತ್ತು ಇವು ಕ್ರಮಾವಳಗಳ ಸುದ್ದಿಯನ್ನು ಅವಲಂಬಿಸಿವೆ. ಇದು ತನ್ನ ಪೋರ್ಟಲ್‌ಗಳಿಗೆ ಪ್ರೇಕ್ಷಕರನ್ನು ವಯಕ್ತಿಕವಾಗಿ ಅವರಿಷ್ಟದ ಸುದ್ದಿಗಳಿಗೆ ತಲುಪಿಸುತ್ತವೆ.

ಲೆವಿನ್ ಮತ್ತು ಮೊಲೆನೂರ್ಕ್ಸ್(೨೦೧೮); ಆನ್‌ಲೈನ್ ಸುದ್ದಿ ಪೋರ್ಟಲ್‌ಗಳಲ್ಲಿ ಸುದ್ದಿಗಳನ್ನು ಅರ್ಥಮಾಡಿಕೊಳ್ಳುವುದು ಸರಳವಾಗಿದೆ. ಸುದ್ದಿ ಹಂಚಿಕೆಗೆ ತನ್ನದೆ ಆದ ಸಾಂಸ್ಥಿಕತೆ ಬಳಸಿದ್ದರಿಂದ ಇದು ಸುಲಭವಾಗಿದೆ. ಬಹುಸಂಖ್ಯೇಯಲ್ಲಿ ತಲುಪಿದ ಸುದ್ದಿಗಳು ಹಂಚಿಕೆಯಾಗಿದೆ ಮತ್ತು ಅವುಗಳು ಯಾವವು ಎಂಬುವುದನ್ನು ಕಂಡುಕೊಳ್ಳಬಹುದು. ಇದೊಂದು ಅವಲಂಬನೆಯ ವ್ಯಾಪ್ತಿಯನ್ನು ಹೊಂದಿದೆ.

ಜೊನ್ನಾ ಬರ್ಗರ್(೨೦೧೯);

ಸುದ್ದಿ ಮತ್ತು ಮಾಹಿತಿಗಳ ಹಂಚಿಕೆಯು ಕೆಲವು ಸಾರಿ ಭಾವನಾತ್ಮಕ ಪ್ರಚೋದನೆಯಾಗಿದೆ. ಮತ್ತು ಸ್ವ ನಿಯಂತ್ರತೆಯ ಕಾರ್ಯ ನಿರ್ವಹಣೆಯನ್ನು ಹೊಂದಿದೆ. ಯಾರು ಬೇಕಾದಾರೂ ಯಾರಿಗಾದರೂ ಕಳುಹಿಸಬಹುದು ಇದರಿಂದ ಸಾಮಾಜಿಕ ಪ್ರಸರಣ ಹೆಚ್ಚುವುದು ಹಾಗೂ ಓದುಗರಿಗೆ ಮುಕ್ತವಾಗಿ ಯಾವುದೇ ನಿರ್ಬಂಧವಿಲ್ಲದ ಅವಕಾಶಗಳನ್ನು ನೀಡಿವೆ. ಭಯ ವಿನೋದಮಯ, ಮನರಂಜನೆ ಮತ್ತು ಭಾವನಾತ್ಮಕ ಸುದ್ದಿಗಳೂ ಜನರಿಗೆ ಹೆಚ್ಚೆಚ್ಚು ಸುದ್ದಿ ಹಂಚಿಕೊಳ್ಳಲೂ ಪ್ರೇರೆಪಿಸುತ್ತದೆ.

**ಸಮಸ್ಯೆಯ ನಿರೂಪಣೆ;**

ಪ್ರಸ್ತುತ ದಿನಗಳಲ್ಲಿ ಸುದ್ದಿ ಹಂಚಿಕೆಯು ಬಹು ಅವಶ್ಯಕತೆಯ ಮತ್ತು ಅನಿವಾರ್ಯದ ಅಂಶವಾಗಿದೆ. ಓದುಗರಿಗೆ ಅನಕೂಲಕರವಾಗಿ ಅಗಾಧ ಪ್ರಭಾವ ಬೀರಿದೆ ಎಂಬುವುದು ಒಪ್ಪಲೇಬೇಕಾದ ಸಂಗತಿಯಾಗಿದೆ. ಈ ಅಧ್ಯಯನವು ಪೋರ್ಟಲ್‌ನ ವೀಕ್ಷಕಕರ ಸಂಖ್ಯೆಯನ್ನು ಹೆಚ್ಚಿಸುವದರ ಜೊತೆಗೆ ಆರ್ಥಿಕತೆ ವೃದ್ಧಿಯಾಗುವಲ್ಲಿ ಸುದ್ದಿ ಹಂಚಿಕೆಯ ಪಾತ್ರವನ್ನು ಕಂಡುಕೊಳ್ಳುವುದು ಮತ್ತು ಅದರ ಅನಕೂಲಗಳನ್ನು ತಿಳಿಯುವುದಾಗಿದೆ. ಹಾಗೂ ಓದುಗರು ಆ ಸುದ್ದಿಯನ್ನು ತನ್ನ ಆಪ್ತರಿಗೆ ತಿಳಿಸಲು ಹೇಗೆ ಸುದ್ದಿ ಹಂಚಿಕೆಯನ್ನು ಬಳಸಿಕೊಳ್ಳುತ್ತಾರೆ. ಏಕೆ ಹಂಚಿಕೊಳ್ಳುತ್ತಾರೆ ಮತ್ತು ಯಾಕೆ? ಇದರಿಂದ ಓದುಗರಿಗೆ ಯಾವ ರೀತಿ ಪ್ರಯೋಜನವಾಗುತ್ತದೆ ಎಂಬುವುದನ್ನು ತಿಳಿದುಕೊಳ್ಳಲು ಈ ಸಂಶೋಧನೆಯನ್ನು ಪ್ರಾಯೋಗಿಕವಾಗಿ ಅಧ್ಯಯಿನಸಲಾಗಿದೆ.

**ಅಧ್ಯಯನದ ವಿಧಾನ–**

ಸಂಶೋಧನೆಯು ದತ್ತಾಂಶ ಸಂಗ್ರಹಕ್ಕಾಗಿ ಗುಣಾತ್ಮಕ ವಿಧಾನವನ್ನು ಆಧರಿಸಿದೆ. ದ್ವಿತೀಯ ದತ್ತಾಂಶ ಮೂಲಾಧಾರಗಳಾದ ನಿಯತಕಾಲಿಕೆ ಪತ್ರಿಕಾವರದಿಗಳು ಮತ್ತು ಅಪ್ಲಿಕೇಷನ್ ಬಳಸುವ ಬಳಕೆದಾರರು ಒದಗಿಸಿದ ಮಾಹಿತಿನುಗುಣವಾಗಿ ಸಂಗ್ರಹಿಸಲಾಗಿದೆ ಕೈಪಿಡಿಗಳು ಮತ್ತು ಅಂತರ್ಜಾಲಗಳನ್ನಾಧರಿಸಿದ ಈ ಸಂಶೋಧನಾ ಲೇಖನವನ್ನು ತಯಾರಿಸಿದೆ.

**ಸಾಹಿತ್ಯ ಅಧ್ಯಯನ**

ಪ್ರಸಕ್ತ ದಿನಗಳಲ್ಲಿ ಆನ್‌ಲೈನ್ ಪೋರ್ಟಲ್‌ಗಳು ಓದುಗರ ಜನಪ್ರಿಯತೆಯ ಜಾಗತಿಕ ವಿದ್ಯಮಾನವಾಗಿದೆ. ಪೋರ್ಟಲ್‌ಗಳ ಹುಟ್ಟು ಬೆಳವಣಿಗೆಯು, ಓದುಗರಿಗೆ ಬೇಕೆನಿಸುವ ಹಾಗೆಲ್ಲಾ ಬಯಸಿದ ರೀತಿಯಲ್ಲಿ ವಿನ್ಯಾಸಗೊಂಡಿದ್ದು ನಿಜಕ್ಕೂ ಅಚ್ಚರಿಯ ಸಂಗತಿ, ಅಂತರ್ಜಾಲ ಹಲವಾರು ಅನಕೂಲ ಮತ್ತು ಆಯ್ಕೆಗಳನ್ನೊಳಗೊಂಡಂತಹ ಆಧಾರಿತವಾದ ಸಂವಹನದ ಸಾಧನವಾಗಿದೆ. ಅದರಲ್ಲಿ ಮುಖ್ಯವಾಗಿ ಪೋರ್ಟಲ್‌ಗಳಲ್ಲಿ ಅತೀ ಹೆಚ್ಚು ಓದುಗರನ್ನು ಒಂದೇ ಇಚ್ಛೆಯ ವರ್ಗದವರನ್ನು ಸಮೂಹಗೊಳಿಸುವುದರಲ್ಲಿ ಸುದ್ದಿ ಹಂಚಿಕೆ ಮತ್ತು ಅದರ ಗೋಚರತೆ ಬಹು ಪ್ರಾಮುಖ್ಯತೆ ಹೊಂದಿದೆ. ೧೯೮೦ ರಲ್ಲಿ ಸುದ್ದಿಯು ಮೊಟ್ಟ ಮೊದಲಿಗೆ ಹಂಚಿಕೆಯನ್ನು ನಿರ್ವಹಣೆಗೊಳಿಸಿತು. ಅದು ಆರಂಭದಲ್ಲಿ ವಿಶೇಷತೆಯಂತೆ ಕಂಡು ಬರಲಿಲ್ಲ, ಆದರೆ ಇಂದು ಬಹು ಬೇಡಿಕೆಯ ಅನಿವಾರ್ಯತೆಯ ಅವಶ್ಯವಾದ ಅಂಶವಾಗಿದೆ, ಕಾರಣ ಜಾಗತೀಕರಣದ ತಂತ್ರ ಮತ್ತು ತಂತ್ರಜ್ಞಾನಗಳ ಸುಲಭತೆಯ ಅಳವಡಿಕೆಯಾಗಿದೆ. ಸುದ್ದಿ ಪೋರ್ಟಲ್‌ಗಳ ಮಾಲೀಕರು ತಮ್ಮ ಸುದ್ದಿ ಹಂಚಿಕೆಯ ಕಾರ್ಯತಂತ್ರಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ವ್ಯವಹಾರ ಮಾದರಿಗಳನ್ನು ವೈವಿಧ್ಯಮಯವಾಗಿಸಿದ್ದರಿಂದ ಮಾರುಕಟ್ಟೆಯ ಶಕ್ತಿಯನ್ನು ವೃದ್ಧಿಗೊಳಿಸಿದೆ. ಓದುಗರಿಗೆ ಸುದ್ದಿ ಪೋರ್ಟಲ್ ಒಂದು ಪ್ರಮುಖ ಮಾಧ್ಯಮವಾಗಿದ್ದರೂ ಸಹ ಸುದ್ದಿ ಹಂಚಿಕೆಯಲ್ಲಿ ಸಾಮಾಜಿಕ ಮಾಧ್ಯಮಗಳ ವೇದಿಕೆಗಳು ಬಹುಪಾಲಿನ ಪಾತ್ರವನ್ನು ವಹಿಸಿದೆ. ಇವುಗಳು ಕಡಿಮೆ ಸಮಯದಲ್ಲಿ ಸುದ್ದಿ ಓದುಗರನ್ನು ರೂಪಿಸುವ ಸಾಮರ್ಥ್ಯವನ್ನು ಹೊಂದಿದೆ. ಓದುಗರಿಗೆ ಕ್ರಮಾನುಗತದಲ್ಲಿ ವಿಷಯವನ್ನು ನಿಮಿಷದಿಂದ ನಿಮಿಷಕ್ಕೆ ಹೊಸತನ್ನು ಪೂರೈಸುವುದರೊಟ್ಟಿಗೆ ಆನ್‌ಲೈನ್ ಜಾಹೀರಾತನ್ನು ಸಹ ಅಭಿವೃದ್ಧಿಪಡಿಸಿದೆ. ಇದರ ಮಾರುಕಟ್ಟೆಯು ಇಂದು ತೀವೃಗತಿಯಲ್ಲಿ ಬೆಳವಣಿಗೆ ಹೊಂದುತ್ತಿದೆಯೆಂದರೆ ಸುದ್ದಿ ಹಂಚಿಕೆಯ ವ್ಯಾಪ್ತಿಯು ವಿಶಾಲಗೊಂಡಿದೆ ಎಂದರ್ಥ. ಸುದ್ದಿ ಗೊಂದಲಗಳಿಗೆ ಪರಿಹಾರ ಕಂಡುಕೊಳ್ಳಲೂ, ಮುಕ್ತವಾಗಿ ಚರ್ಚಿಸಲು, ಅಭಿವ್ಯಕ್ತಿ ರೂಪಿಸಲು ಮತ್ತು ಅಭಿಪ್ರಾಯ ಹಂಚಿಕೊಳ್ಳಲೂ ಅನಕೂಲಕರವಾಗಿದೆ. ಏಕೆಂದರೆ ಇಲ್ಲಿ ಮರುಪ್ರಶ್ನೆಗೆ ಮತ್ತು ನಿಖರತೆಗಾಗಿ ಆಯ್ಕೆಯಿದೆ. ಸುಳ್ಳು ಸುದ್ದಿಗಳ ಕಡಿವಾಣಕ್ಕೆ ಯಾರೂ ಬೇಕಾದರೂ ಸಾರ್ವಜನಿಕವಾಗಿ ಪ್ರಶ್ನಿಸಬಹುದು. ಓದುಗಬಳಕೆದಾರರಿಗೆ ಸುದ್ದಿ ಮಾಹಿತಿ ಮತ್ತು ವಿಷಯಗಳನ್ನು ಪೂರೈಸಲು ತಕ್ಷಣಕ್ಕೆ ಗೋಚರಿಸಿ ವಿತರಿಸಲು ಲಿಂಕ್, ನೋಟಿಫಿಕೆಷನ್

(ಬ್ರೌಸಿಂಗ್) ಮುಂತಾದ ವಿತರಣೆಗಳ ಮೂಲಕ ಅದನ್ನು ವಯಕ್ತಿಕವಾಗಿ ಮತ್ತು ಸಾರ್ವಜನಿಕವಾಗಿ ಹಂಚಿಕೆ ಮಾಡುವ ಆಯ್ಕೆಯನ್ನು ಹೊಂದಿದೆ. ಸುದ್ದಿ ಪೋರ್ಟಲ್ ನಿಷ್ಕ್ರಿಯವಾದ ನಿರ್ವಹಣೆ ಹೊಂದಿದ್ದರೂ ಸುದ್ದಿ ಗೋಚರತೆಯಿಂದ ಜನರ ನಡುವೆ ಆಂತರಿಕ ಮತ್ತು ಬಾಹ್ಯವಾಗಿ ಸಂಭಾಷಣೆಯನ್ನು ಉಂಟುಮಾಡುವುದರಿಂದ ಅಪರಿಚಿತರ ಆಪ್ತತೆ ಹೆಚ್ಚಿಸುವಂತೆ ಮಾಡುತ್ತದೆ. ಹೀಗೆ ಪ್ರಸ್ತುತ ದಿನಗಳಲ್ಲಿ ಸುದ್ದಿ ಪೋರ್ಟಲ್ ಸ್ಫೋಟಕಗೊಂಡಿದೆ ಎಂದರೆ ಅದಕ್ಕೆ ಕಾರಣ ತತ್‌ಕ್ಷಣದ ಸುದ್ದಿಯ ತುದಿಬೆರಳಿನ ಕ್ಲಿಕ್‌ನ ಮಾಯಾಜಾಲವಾಗಿದೆ. ಪೋರ್ಟಲ್‌ಗಳು ಅತೀ ಜನಪ್ರಿಯ ಮಾಧ್ಯಮವಾಗಿದ್ದರೂ ಕೂಡಾ ಸುದ್ದಿ ಹಂಚಿಕೆಗೆ ಇತರೆ ನವ ಮಾಧ್ಯಮಗಳ ಮೇಲೆಯೂ ಅವಲಂಬನೆ ಹೊಂದಿದೆ. ತಲೆಬರಹ ಮುಖ್ಯಾಂಶಗಳು, ಛಾಯಾಚಿತ್ರ ಮತ್ತು ವಿಡಿಯೋ ಕ್ಲಿಪ್ಪಿಂಗ್‌ಗಳು ಮುಂತಾದವು ಓದುಗರ ಸುದ್ದಿಯ ಆಯ್ಕೆಗೆ ಸಹಾಯಕವಾಗಿವೆ. ಮತ್ತು ಸ್ವಯಂಚಾಲಿತ ವರ್ಗಾವಣೆ ಇರುವುದರಿಂದ ಅಸಂಖ್ಯಾತ ಜನರನ್ನು ತಲುಪುತ್ತದೆ. ವಿಷಯವನ್ನು ಪ್ರೇಕ್ಷಕರಿಗೆ ಮಾರಾಟ ಮಾಡುವ ಉದ್ದೇಶವೇ ಸುದ್ದಿ ಹಂಚಿಕೆಯ ಕಾರ್ಯನಿರ್ವಹಣೆಯಾಗಿದೆ. ಇದರ ವರದಿಗಾರಿಕೆಯೂ ಪತ್ರಿಕೆಗಳ ಹಾಗೇ ದೀರ್ಘ ವರದಿಗಾರಿಕೆ ಹೊಂದದೆ ಕಡಿಮೆ ವರದಿಗಾರಿಕೆಯೊಂದಿಗೆ ಸಂಪೂರ್ಣ ವಿಷಯವನ್ನೊಳಗೊಂಡು ಜನರನ್ನು ತನ್ನ ಡಿಜಿಟಲ್ ಪೋರ್ಟಲ್‌ಗಳತ್ತ ಸೆಳೆದುಕೊಳ್ಳುವುದಷ್ಟೇ ಅಲ್ಲದೇ ಅದರ ವೈಶಿಷ್ಟ್ಯಧಾರಿತದ ಮೇಲೆ ನೆಚ್ಚಿನ ಪೋರ್ಟಲ್‌ನ್ನು ಸಹ ಕಲೆಹಾಕಲು ಓದುಗರಿಗೆ ಪ್ರೇರಣೆ ನೀಡುತ್ತದೆ. ಇದು ಕಲಿಕೆಯ ಮತ್ತು ಆರ್ಥಿಕ ಮೌಲ್ಯವನ್ನು ಹೆಚ್ಚಿಸುವುದರ ಜೊತೆಗೆ ಸಾಮಾಜಿಕ ಸಮಗ್ರ ಮೌಲ್ಯವನ್ನೊಳಗೊಂಡು ಓದುಗರಿಗೆ ಮತ್ತು ಪೋರ್ಟಲ್‌ನ ಸಂಸ್ಥೆಗೂ ಸಹಾಯ ಮಾಡುತ್ತದೆ. ಅದರಲ್ಲಿ ಮುಖ್ಯವಾಗಿ ತತ್‌ಕ್ಷಣತೆ, ವೇಗ ಸುಲಭತೆ, ಮತ್ತು ಕಡಿಮೆ ಅಕ್ಷರಜ್ಞಾನ ಹೊಂದಿದವರೂ ಸಹ ಇದನ್ನು ಬಳಸಿಕೊಳ್ಳಬಹುದಾಗಿದೆ. ಸುದ್ದಿ ಪೋರ್ಟಲ್ ತನ್ನ ವಿಸ್ತೃತೆ ಹೆಚ್ಚಿಸಲು ಮಾಧ್ಯಮ ಮಾರುಕಟ್ಟೆಯ ಅಗಾಧ ಸಾಮರ್ಥ್ಯವನ್ನು ನಿಭಾಯಿಸಬೇಕಾಗುತ್ತದೆ. ವಿಷಯ ಹಂಚಿಕೊಳ್ಳಲೂ ಮತ್ತು ಓದುಗರೊಡನೆ ವ್ಯವಹಾರ ಗೋಚರತೆ ಹೆಚ್ಚಿಸುವಂತೆ ಮಾಡಲು ಸುದ್ದಿ ಪೋರ್ಟಲ್‌ನ ಪ್ರಕ್ರಿಯೆಯು ಸಹ ವೆಚ್ಚದಾಯಕವಾಗಿದೆ. ಓದುಗ –ಗ್ರಾಹಕರು ವಿಷಯ ಹಂಚಿಕೊಳ್ಳಲೂ ಪೋರ್ಟಲ್‌ಗಳ ವಿಶ್ವಾಸ ಮತ್ತು ಜನಸಂಪರ್ಕವು ಸಹ ಅಷ್ಟೇ ಅಗತ್ಯವಾಗಿದೆ. ನೆಟ್‌ವರ್ಕ್ ಜಾಲದ ವಿಸ್ತಾರತೆಯು ತನ್ನ ಬ್ರ್ಯಾಂಡ್‌ನ್ನು ಮತ್ತು ಓದುಗರನ್ನು ತನ್ನತ್ತ ಸೆಳೆಯಲು ಸುದ್ದಿ ಹಂಚಿಕೆಯಲ್ಲಿ ಅವಕಾಶಗಳನ್ನು ಹೆಚ್ಚಿಸಿದರೆ ಹೊಸ ಓದುಗರಿಗೆ ಪ್ರವೇಶಾತಿಯನ್ನು ನೀಡುತ್ತದೆ. ಓದುಗರೊಂದಿಗೆ ಪಾರದರ್ಶಕತೆಯ ಸಂಬಂಧ ಬೆಳೆಸಿ ಸಹಮತಿಯನ್ನು ನೀಡುತ್ತದೆ. ಅವರು ಹೊಂದಿರುವ ಪ್ರತಿಯೊಂದು ಅವಕಾಶವನ್ನು ಬಳಸಿಕೊಳ್ಳುವಂತೆ ಶಿಫಾರಸ್ಸು ಮಾಡುತ್ತದೆ. ದೇಶಾದ್ಯಂತ ಇಂದು ಸಾಮಾಜಿಕ ಮಾಧ್ಯಮಗಳನ್ನು ಸಾವಿರಾರು ಜನ ಬಳಸುತ್ತಾರೆ. ಅದು ಸಕ್ರಿಯವಾದ ಸುದ್ದಿ ಹಂಚಿಕೆಯನ್ನೊಳಗೊಂಡಿದೆ. ಇಂದು ಬಹುತೇಕ ಪತ್ರಿಕೆಗಳು ಡಿಜಿಟಲೀಕರಣಗೊಂಡಿದ್ದರಿಂದ ಸುದ್ದಿಯನ್ನು ಹಂಚಿಕೆ ಮಾಡುವುಲ್ಲಿ ನಾವು ಸಾಕಷ್ಟು ಸವಾಲುಗಳನ್ನು ಎದುರಿಸಬಹುದಾಗಿದೆ.

**ದತ್ತಾಂಶ ವಿಶ್ಲೇಷಣೆ;**

ಪ್ರಸ್ತುತ ದಿನಗಳಲ್ಲಿ ಸುದ್ದಿ ಹಂಚಿಕೆಯು ಓದುಗರ ಮೇಲೆ ಅಗಾಧ ಪ್ರಭಾವ ಬೀರಿದೆ. ತಮಗೆ ಇಷ್ಟವಾದ ಸುದ್ದಿಯನ್ನು ತನ್ನ ಆಪ್ತತೆಯ ಮತ್ತು ಸಮಾನ ಮನಸ್ಕ ವರ್ಗದ ಜನರೊಂದಿಗೆ ಸಂವಹನ ಸಾಧಿಸುವುದರ ಜೊತೆಗೆ ಅವರಿಗೆ ಅದನ್ನು ತಲುಪಿಸಲು ಇದು ಬಹುಪಯೋಗಿ ಆಗಿದೆ. ಇದು ವೇಗವಾಗಿ ತಲುಪುವಂತಹ ಸಂವಹನ ವೇದಿಕೆಯಾಗಿ ತತ್‌ಕ್ಷಣತೆ ಆಗಿರುವುದರಿಂದ ಪ್ರತಿಯೊಬ್ಬರೂ ಸಹ ಇದರ ಪಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. ಓದುಗರಿಗೆ ಇದೊಂದು ಅತ್ಯುತ್ತಮವಾದ ಆಯ್ಕೆಯಾಗಿದೆ. ಇಂದು ಸುದ್ದಿ ಪ್ರಸಾರದ ಹೆಚ್ಚಳದ ತಲುಪುವಿಕೆಯನ್ನು ಹೆಚ್ಚಿಸಲು ಅಂತರ್ಜಾಲದ ಸುದ್ದಿ ಹಂಚಿಕೆಯ ಲಿಂಕ್‌ನಿಂದ ಮಾತ್ರ ಸಾಧ್ಯವಾಗಿಸಿ ಬಿಟ್ಟಿದೆ. ಅವಶ್ಯಬಿದ್ದಲ್ಲಿ ಹಳೆಯ ಸುದ್ದಿಗಳ ಗುಚ್ಛನ್ನು ಒಂದೇ ಲಿಂಕ್‌ನ ಮುಖಾಂತರ ಬೇರೆಯವರಿಂದ ಪಡೆದುಕೊಳ್ಳಬೇಕಾದರೆ ನಾವು ಅನೌಪಚಾರಿಕವಾಗಿ ಬಳಸುವ ಅಸ್ತ್ರವೇ ಸುದ್ದಿಹಂಚಿಕೆ. ಸುದ್ದಿಯೊಂದಿಗೆ ಅದಕ್ಕೆ ಸಂಬಂಧಿಸಿರುವ ಚಿತ್ರ ಮತ್ತು ದೃಶ್ಯದ ತುಣುಕುಗಳನ್ನು ಹಂಚಿಕೊಳ್ಳಬಹುದಾಗಿದೆ. ಇವೆಲ್ಲವೂ ಡಿಜಿಟಲ್ ಪೋರ್ಟಲ್‌ನ ಲಾಭದ ನಿರ್ಣಾಯಕದ ಅಂಶಗಳಾಗಿದೆ. ಸುದ್ದಿ ಹಂಚಿಕೆಯು ಜನರನ್ನು ಒಗ್ಗೂಡಿಸುವ ಮತ್ತು ಅವರಿಗೆ ಇಷ್ಟವಾದ ಸುದ್ದಿಗಳನ್ನು ತಮ್ಮ ಆಪ್ತರಿಗೆ ಪ್ರತ್ಯೇಕವಾಗಿ ಹಂಚಿಕೆ ಮಾಡಲು ಅವಕಾಶವನ್ನು ಹೊಂದಿದೆ. ಸುದ್ದಿ ಹಂಚಿಕೆಯು ಉತ್ತೇಜನಕಾರಿ ಮತ್ತು ಉದ್ದೇಶಪೂರಿತವಾಗಿದೆ ಎಂದು ತಿಳಿದು ಬಂದಿದೆ. ಪ್ರಸ್ತುತ ಈ ಅಧ್ಯಯನದಿಂದ ತಿಳಿದು ಬಂದ ಮಾಹಿತಿಯ ಪ್ರಕಾರ ಸಂಶೋಧನೆಗೆ ಆಯ್ದುಕೊಂಡ ಸುದ್ದಿ ಹಂಚಿಕೆಯ ಎಂಬ ವಿಷಯವು ಸಕಾರಾತ್ಮಕವಾಗಿ ಮತ್ತು ನಕಾರಾತ್ಮಕವಾಗಿಯೂ ಪರಿಣಾಮ ಬೀರಿದೆ. ಸುದ್ದಿ ಹಂಚಿಕೆಯು ಓದುಗರಿಗೆ ಸುದ್ದಿಯನ್ನು ಸವಿಸ್ತಾರವಾಗಿ ನೀಡುವುದರ ಜೊತೆಗೆ ಅದಕ್ಕೆ ಸಂಬಂಧಿಸಿದ ಸುದ್ದಿಗಳನ್ನು ವರ್ಗಾಯಿಸಲೂ ಸಹ ಸಹಾಯಕವಾಗಿದೆ. ಮತ್ತು ಇದರಿಂದ ಸುದ್ದಿ ಪೋರ್ಟಲ್‌ಗಳ ಮಾರುಕಟ್ಟೆಯು ವೃದ್ಧಿಗೊಂಡಿದ್ದರಿಂದ ಜಾಹೀರಾತುಗಳ ಹೆಚ್ಚಿನ ಸಂಖ್ಯೆಯಲ್ಲಿ ಪ್ರಸಾರವಾಗುತ್ತಿವೆ. ಸುದ್ದಿ ಹಂಚಿಕೆಯು ಓದುಗರಿಗೆ ಸಹಾಯಕ ರೂಪದಲ್ಲಿ ಇತರೆ ಸುದ್ದಿ ಪೋರ್ಟಲ್‌ಗಳನ್ನು ಪರಿಚಯಿಸುತ್ತದೆ. ಇದನ್ನು ಸುದ್ದಿ ಹಂಚಿಕೆಯ ಜೊತೆಗೆ ವ್ಯವಹಾರಕ್ಕೂ ಬೆಳೆಸಲಾಗುತ್ತದೆ. ಅಂತರ್ಜಾಲ ಚಟುವಟಿಕೆಗಳಲ್ಲಿ ಸುದ್ದಿ ಹಂಚಿಕೆಯ ಸಂಖ್ಯೆಯು ಪಾರದರ್ಶಕತೆಯಿಂದ ಕೂಡಿದ್ದರಿಂದ ಯಾರು ಅದನ್ನು ಇಷ್ಟಪಡುತ್ತಾರೆ ಮತ್ತು ಆ ಸುದ್ದಿಯನ್ನು ಯಾಕೆ ತಿರಸ್ಕರಿಸುತ್ತಾರೆ ಎಂಬ ಅಂಶವನ್ನು ತಿಳಿಯಲು ಸಹಾಯಕವಾಗಿದೆ. ಹಳೆಯ ಮತ್ತು ಹೊಸ ಸುದ್ದಿಗಳ ಲಿಂಕ್‌ಗಳ ನಿರ್ಮಾಣದ ಜೋಡಣೆಗಳಿಗೆ ಸಹಾಯ ಮಾಡುವುದು. ಅದು ಹಂಚಿಕೆಯಾದಾಗ ಮಾತ್ರ ನಿಶ್ಚಿತತೆ ರೂಪ ಪಡೆದು ಓದುಗರಿಗೆ ಗೋಚರತೆಯಾಗುತ್ತದೆ. ಸಾಧ್ಯತೆಯನ್ನು ಮೀರಿ ಅಸಂಖ್ಯಾತ ಜನರಿಗೆ ಸಮಗ್ರ ರೂಪದಲ್ಲಿ ತಲುಪಿಸಲು ಖಚಿತತೆಯ ರೂಪವಾಗಿದೆ.

**ಸಲಹೆಗಳು;**

ಸುದ್ದಿ ಹಂಚಿಕೆಯು – ಸುದ್ದಿ ಪ್ರಸಾರದ ಪೈಪೋಟಿಯ ಜಟಾಪಟಿಯಲ್ಲಿ ಸುದ್ದಿಯನ್ನು ಬಿತ್ತರಿಸುವುದರ ಜೊತೆಗೆ ಅದರ ಅಭಿವೃದ್ಧಿಯ ಬೆಳವಣಿಗೆಯತ್ತ ಗಮನಹರಿಸಬೇಕು ಮತ್ತು ಸುದ್ದಿ ಹಂಚಿಕಯೊಂದೆ ಇದರ ಗುರಿಯಾಗದೇ ಓದುಗರನ್ನು ತಲುಪಿದ ನಂತರ ಅದರ ಪ್ರತಿಕ್ರಿಯೆಯನ್ನು ಗಮನಿಸಬೇಕು. ವಿವಾದಗಳಿಗೆ ಮತ್ತು ನಕಾರಾತ್ಮಕ ಪ್ರತಿಕ್ರಿಯೆಗಳಿಗೆ ಹತಾಶೆಗೊಳ್ಳಬಾರದು. ಸುದ್ದಿ ಹಂಚಿಕೆಯೆಂಬ ಆಯ್ಕೆಯು ಬಂಡವಾಳಶಾಹಿಯ ಹೊಸ ರೂಪವಾಗಿ ಇಂದು ಪರಿವರ್ತನೆಯಾಗುತ್ತಿರುವುದರಿಂದ ಸುದ್ದಿಯು ತನ್ನ ಅರ್ಹತೆಯನ್ನು ಕಳೆದುಕೊಳ್ಳಬಾರದಂತೆ ನಿರ್ವಹಿಸಬೇಕು. ಪ್ರಸ್ತುತ ಪತ್ರಿಕೋದ್ಯಮದ ಪ್ರಮುಖ ಕಾರ್ಯತಂತ್ರವಾಗಿ ಮಾರ್ಪಾಟ್ಟಿದೆ.

**ಉಪಸಂಹಾರ;**

ಇಂದು ಸುದ್ದಿ ಹಂಚಿಕೆಯು ಎಲ್ಲಾ ಸಾಮಾಜಿಕ ಮಾಧ್ಯಮಗಳನ್ನು ಆವರಿಸಿ, ಇಂದಿಗೂ ಮಾಧ್ಯಮ ಕ್ಷೇತ್ರದಲ್ಲಿ ಪ್ರಮುಖ ಪಾತ್ರವಾಗಿ ನಿರ್ವಹಣೆಗೊಳ್ಳುತ್ತಿದೆ. ತನ್ನ ಸುದ್ದಿ ಪೋರ್ಟಲ್‌ಗಳ ಸಂಸ್ಥೆಗೆ ಪ್ರತ್ಯೇಕತೆಯ ಲಾಭದ ರೂಪದಲ್ಲಿ ಆಧಾರಿತ ಅಂಶವಾಗಿದೆ. ಸುದ್ದಿ ಹಂಚಿಕೆಯು ಅತೀ ಹೆಚ್ಚು ಜನರನ್ನು ತಲುಪುವ ಗುರಿಯನ್ನು ಹೊಂದಿದಷ್ಟು ಸುದ್ದಿಯನ್ನು ತಿಳಸುವಲ್ಲಿ ಹೊಂದಿಲ್ಲ ಎಂದು ತಿಳಿದು ಬಂದಿದೆ. ಓದುಗರಿಗೆ ಸರಳ ನಿರೂಪಣೆಯಾಗಿದ್ದರಿಂದ ಸುದ್ದಿಯ ಜೊತೆಗೆ ಜಾಹೀರಾತು ಹಂಚಿಕೆಯಾಗುತ್ತಿದೆ ಇದರಿಂದ ಓದುಗರಿಗೆ ಉತ್ಪನ್ನ ಮತ್ತು ಸೇವೆಗಳ ಮಾಹಿತಿ ದೊರೆಯುವುದರ ಜೊತೆಗೆ ವ್ಯಾಪಕವಾದ ಹಂಚಿಕೆಯನ್ನು ಪಡೆದುಕೊಳ್ಳುತ್ತಿದೆ. ಮತ್ತು ಮಾಹಿತಿ ಸಂಸ್ಕರಣೆ ಬಳಕೆಯಾಗಿದ್ದರಿಂದ ಪತ್ರಿಕೋದ್ಯಮದ ಭವಿಷ್ಯವನ್ನು ರೂಪಿಸುವಲ್ಲಿ ಸುದ್ದಿ ಹಂಚಿಕೆಯು ಸುದ್ದಿ ವಿಶ್ಲೇಷಣೆಯ ಶಕ್ತಿಯನ್ನು ಬಲಪಡಿಸುತ್ತಿದೆ.

**ಪರಾಮರ್ಶನ ಗ್ರಂಥಗಳು;**

೧. ವೆಬ್ ವಿಕಿಪೀಡಿಯಾ
೨. ಡಾ ಪವನಜ, ಯು.ಬಿ ಅವರ ವೆಬ್‌ಸೈಟ್‌ನ ಲೇಖನಗಳು
೩. ್ಜಣಣಠಿ://ತಿತಿತಿ. ಅಡಿಜಚಿಣಚಿಜಿಟಚಿಟುಜಡಿಂ
೪. ್ಜಣಣಠಿ://ತಿತಿತಿ.ಞಟ.ಡಿಟುಚಿಟಜಉಜಚಿ.ಛಿಟಡಿ
೫. ್ಜಣಣಠಿ://ತಿತಿತಿ.ಚಿಛಿಣಣಚಿಟಚಿಜಚಿಜಚಿಥಿಟಚಿಡಿಛಿಜಛಿಟ
೬. ್ಜಣಣಠಿ://ತಿತಿತಿ.ಚಿಜಥಿಜಛಿಟ
೭. ್ಜಣಣಠಿ://ತಿತಿತಿ.ಜು.ಬತಿಞಉಜಚಿ.ಛಿಟ
೮. ್ಜಣಣಠಿ://ತಿತಿತಿ.ತಿತಿತಿ.ಠಿಛಿಟಚಿಂಛಿಟ
೯. ್ಜಣಣಠಿ://ತಿತಿತಿ.ಜಣಟಜಛಿಟ
೧೦.್ಜಣಣಠಿ://ತಿತಿತಿ.ಜಣಿಟಟಚಿಜ.ಛಿಟಜಾ.ಛಿಟ
೧೧.್ಜಣಣಠಿ://ತಿತಿತಿ.ಜಣಜಣಛಿಟ

**Shikshan Sanshodhan : Journal of Arts, Humanities and Social Sciences** ISSN: 2581-6241
Monthly, Peer-Reviewed, Refereed, Indexed Journal Impact Factor: 5.146
Volume - 5, Special Issue - 4, July - 2022 Publication Date: 31/07/2022

DOIs:10.2018/SS/ NCMRTRI003 --:-- Research Paper / Article

# ಶಿಕ್ಷಣದಲ್ಲಿ ಡಿಜಿಟಲ್ ಮಾಧ್ಯಮದ ಪಾತ್ರ ಕುರಿತು : ಒಂದು ಅಧ್ಯಯನ

***ರವೀಂದ್ರಕುಮಾರ ಪಿ ಬಣಕಾರ**
ಸಂಶೋಧನಾ ವಿದ್ಯಾರ್ಥಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ ದಾವಣಗೆರೆ

****ಡಾ. ಶಿವಕುಮಾರ ಕಣಸೋಗಿ**
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ
ದಾವಣಗೆರೆ ವಿಶ್ವವಿದ್ಯಾನಿಲಯ ದಾವಣಗೆರೆ

***ಂಛಾಡಿಚಿಛಿಣ:*** ಡಿಜಿಟಲ್ ತಂತ್ರಜ್ಞಾನದ ಪ್ರಸರಣವು ಶಿಕ್ಷಣವನ್ನು ತಲುಪಿಸುವ ಮತ್ತು ಸ್ವೀಕರಿಸುವ ವಿಧಾನದಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ತರುತ್ತಿದೆ. ಶಿಕ್ಷಣವು ಡಿಜಿಟಲೀಕರಣದೊಂದಿಗೆ ಶೈಕ್ಷಣಿಕ ಕಾರ್ಯಕ್ರಮಗಳ ಪ್ರಭಾವವು ದಿನದಿಂದ ದಿನಕ್ಕೆ ಬಿರುತ್ತಿದೆ. ಡಿಜಿಟಲ್ ಶಿಕ್ಷಣ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಕಲಿಯಲು ಮತ್ತು ಕಲಿಸಲು ಹೊಸ ಅವಕಾಶವನ್ನು ಒದಗಿ ಕೊಡುತ್ತಿದೆ'. ಡಿಜಿಟಲ್ ತಂತ್ರಜ್ಞಾನ ಕಲಿಕೆಯಿಂದ ವಿದ್ಯಾರ್ಥಿಳು ಹೆಚ್ಚಿನ ಭಾಗವಹಿಸುವಿಕೆಯನ್ನು ಕಾಣಬಹುದು. ಹೊಸ ತಂತ್ರಜ್ಞಾನದ ನೆರವಿನ ಕಲಿಕೆಯ ಸಾಧನಗಳಾದ ಸ್ಮಾರ್ಟ್‌ಬೋರ್ಡ್‌ಗಳು, ಎಂಒಒಸಿ(ಒಔಔಅ)ಗಳು, ಟ್ಯಾಬ್ಲೆಟ್ ಮತ್ತು ಲ್ಯಾಪ್‌ಟಾಪ್ ಇತ್ಯಾದಿಗಳ ಆಗಮನದೊಂದಿಗೆ ಶಾಲೆ ಮತ್ತು ಕಾಲೇಜುಗಳಲ್ಲಿ ಶಿಕ್ಷಣ ನೀಡುವ ವಿಧಾನ ಬದಲಾಗಿಸಲಾಗಿದೆ. ಪ್ರಸ್ತುತ ಸರಿಯಾದ ಶಿಕ್ಷಣ ಸೌಲಭ್ಯಗಳನ್ನು ಪಡೆಯಲು ಹೆಣಗಾಡುತ್ತಿರುವ ಜನರಿಂದ ಶಿಕ್ಷಣದ ಪ್ರವೇಶವನ್ನು ಹೆಚ್ಚಿಸಲು ನವೀನ ಪರಿಹಾರಗಳನ್ನು ಕಂಡು ಹಿಡಿಯಲು ಎಜುಟೆಕ್ ಸಂಸ್ಥೆಯು ನಿರಂತರವಾಗಿಕಾರ್ಯನಿರ್ವಹಿಸುತ್ತಿವೆ.

ಪ್ರಪಂಚಾದ್ಯಂತ ಯುವಜನರು ಆನ್‌ಲೈನ್ ಕೋರ್ಸ್‌ಗಳನ್ನು ತೆಗೆದುಕೊಳ್ಳುತ್ತಿದ್ದು. ಡಿಜಿಟಲ್ ಶಿಕ್ಷಣದಲ್ಲಿ ಒಂದು ಬಾರಿ ಸಂಪನ್ಮೂಲಗಳನ್ನು ಸೃಷ್ಟಿಸಿದರೆ ಸಾಕು ಅದನ್ನು ಯಾರು ಬೇಕಾದರು ಬಳಸಿಕೊಳ್ಳಬಹುದು. ಹೀಗೆ ಸಾಕಷ್ಟು ಸಂಪನ್ಮೂಲಗಳು ಡಿಜಿಟಲ್ ತಂತ್ರಜ್ಞಾನದಲ್ಲಿ ದೊರೆಯುವುದರಿಂದ ಯಾವುದೇ ಸಮಯದಲ್ಲಿ ಡಿಜಿಟಲ್ ಶಿಕ್ಷಣವು ವೈಯಕ್ತಿಕವಾಗಿ ಕಲಿಯುವವರ ವೈಯಕ್ತಿಕ ಅಗತ್ಯತೆಯ ಆಧಾರದ ಮೇಲೆ ಶೈಕ್ಷಣಿಕ ಉತ್ಪನ್ನಗಳನ್ನು ಕ್ರೂಢಿಕರಿಸಲು ಎಲ್ಲರಿಗೂ ಇಲ್ಲ ಅಧಿಕಾರ ನೀಡುತ್ತದೆ.

***ಏಜಥಿ ಘಾಔಜs:*** ಡಿಜಿಟಲ್ ಶಿಕ್ಷಣದ ಕಲಿಕೆಯ ಸ್ಥಿತಿಗತಿ, ಡಿಜಿಟಲ್ ಶಿಕ್ಷಣದ ಪ್ರವೃತ್ತಿಗಳು, ಕಲಿಕಾ ಸಂಪನ್ಮೂಲಗಳು, ಆಧುನಿಕ ಕಲಿಕಾ ನಿರ್ವಹಣಾ ಪದ್ಧತಿ, ಶಿಕ್ಷಣದಲ್ಲಿ ಡಿಜಿಟಲ್ ಮಾಧ್ಯಮದ ಪಾತ್ರ

**ಭವಿಷ್ಯತ್ತಿನಲ್ಲಿ ಭಾರತದ ಡಿಜಿಟಲ್ ಶಿಕ್ಷಣದ ಕಲಿಕೆಯ ಸ್ಥಿತಿಗತಿ:**
ಶಿಕ್ಷಣದಲ್ಲಿ ಡಿಜಿಟಲ್ ಕಲಿಕೆ ಭವಿಷ್ಯದಲ್ಲಿ ಭಾರತಕ್ಕೆ ಪ್ರಮುಖ ಮುಖವಾಗಲಿದೆ. ಸ್ಮಾರ್ಟ್ ತಂತ್ರಜ್ಞಾನಗಳು ದೇಶದ ಒಟ್ಟಾರೆ ಶೈಕ್ಷಣಿಕ ಚೌಕಟ್ಟನ್ನು ಹೇಗೆ ಬದಲಾಯಿಸುತ್ತಿವೆ ಎಂದು ನೋಡಿದರೆ ಆಶ್ಚರ್ಯವಾಗುತ್ತದೆ. ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಡಿಜಿಟಲ್ ಶಿಕ್ಷಣದ ನುಗ್ಗುವಿಕೆ ಅತೀ ವೇಗವಾಗಿ ವಿಕಸನಗೊಳ್ಳುತ್ತಿದೆ, ಕೈಗೆಟುಕುವ ಹೈಸ್ಪೀಡ್ ಅಂತರಜಾಲ ಮತ್ತು ಡೈರೆಕ್ಟ್ ಟು ಡಿವೈಸ್ ತಂತ್ರಜ್ಞಾನಗಳು ಗ್ರಾಮೀಣ ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಅಧ್ಯಯನ ಮಾಡಲು ಮತ್ತು ಅವರ ಕೌಶಲ್ಯ ಹಾಗೂ ಜ್ಞಾನವನ್ನು ವಿಸ್ತರಿಸಲು ಸಹಾಯಕವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ವಿಶೇಷವಾಗಿ ಸಾಂಪ್ರದಾಯಕ ಬೋಧನಾ ವಿಧಾನದಲ್ಲಿ ಇರುವುದರಿಂದ ಮತ್ತು ಶಿಕ್ಷಕರ ಕೊರತೆ ಹಾಗೂ ಅಸಮರ್ಪಕ ವಿದ್ಯಾರ್ಥಿ ಶಿಕ್ಷಕರ ಅನುಪಾತ ಮತ್ತು ಸಾಕಷ್ಟು ಬೋಧನಾ ಸಂಪನ್ಮೂಲಗಳಂತಹ ಗಂಭೀರ ಸವಾಲುಗಳೊಂದಿಗೆ ಹೋರಾಡುತ್ತಿದ್ದಾರೆ. ಶೈಕ್ಷಣಿಕ ವಲಯದಲ್ಲಿ ಡಿಜಿಟಲೀಕರಣದಿಂದಾಗಿ ಹಿಂದುಳಿದ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಇತ್ತೀಚಿನ ಬೋಧನಾ ಸಾಧನಗಳಾದ ಎಲ್.ಸಿ.ಡಿ ಪರದೆಗಳು, ವೀಡಿಯೊಗಳು ಮುಂತಾದ ವಿಧಾನಗಳ ಸಹಾಯದಿಂದ ಕಲಿಸಲಾಗುತ್ತಿದೆ. ಶಿಕ್ಷಣದಿಂದ ದೂರು ಉಳಿದಿರುವಂತಹ ವಿದ್ಯಾರ್ಥಿಗಳನ್ನು ಈ ಡಿಜಿಟಲ್ ತಂತ್ರಜ್ಞಾನದಿಂದ ಶಿಕ್ಷಕರಿಗೆ ಸಂಪರ್ಕ ಸಾಧಿಸಲು ಸಹಾಯಕವಾಗಿದೆ. ಮುಂದಿನ ದಿನಗಳಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸಲು ಡಿಜಿಟಲ್ ಮಾಧ್ಯಮ ಖಂಡಿತವಾಗಿ ಸಹಾಯ ಮಾಡುತ್ತದೆ.

**ಅಧ್ಯಯನದ ಉದ್ದೇಶ :** ಶಿಕ್ಷಣದ ಮೇಲೆ ಮಾಧ್ಯಮದ ಪಾತ್ರವನ್ನು ತಿಳಿಯಲು ಮತ್ತು ಯಾವ ರೀತಿಯಾಲ್ಲಿ ಮಾಧ್ಯಮಗಳು ಸಕಾರಾತ್ಮಕವಾಗಿ ವಿದ್ಯಾರ್ಥಿಗಳಿಗೆ ಸ್ಪಂದಿಸುತ್ತವೆ ಎಂಬುದನ್ನು ತಿಳಿದುಕೊಳ್ಳುವದು.

**ಅಧ್ಯಯನದ ವಿಧಾನ :** ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸಿದ್ದು, ಸಂಶೋಧಕರು ದ್ವಿತೀಯ ಹಂತದ ಮಾಹಿತಿ ಪರಿಕರಗಳಾದ ಗ್ರಂಥ, ಪುಸ್ತಕ, ಮಹಾಪ್ರಬಂಧ, ದಿನಪತ್ರಿಕೆ, ಅಂತರಜಾಲ ಮತ್ತು ಮಾಸಿಕ ಸಂಶೋಧನಾ ಪತ್ರಿಕೆಗಳನ್ನು ಆಧಾರಿಸಿ ಮಾಹಿತಿಯನ್ನು ಕ್ರೂಢಿಕರಿಸಿದ್ದು, ನಂತರ ಸಂಶೋಧನಾ ವಿಧಾನದ ಅನುಸಾರವಾಗಿ ವಿಶ್ಲೇಷಣೆ ಮಾಡಲಾಗಿದೆ.

**ಅಧ್ಯಯನದ ಮಹತ್ವ:** ಪ್ರಸ್ತುತ ಮಾಧ್ಯಮ ಕೇವಲ ಸುದ್ದಿ ಮಾಹಿತಿಯನ್ನು ಒದಿಗಿಸುವುದರ ಜೊತೆಗೆ ವಿವಿಧ ವಿಷಯಗಳ ಕುರಿತು ಪ್ರಸ್ತುತ ಪ್ರಾಥಮಿಕ ಮತ್ತು ಪ್ರೌಢ ಹಂತದ ಕಲಿಕಾ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ವಿಶೇಷವಾಗಿ ಪತ್ರಿಕೆ ರೇಡಿಯೋ ಮತ್ತು ಟಿವಿ ಮಾಧ್ಯಮಗಳು ಹೊಸ ರೀತಿಯಲ್ಲಿ ತರಗತಿ ಆಧಾರಿತ ಬೊಧನೆ ಮಾಡುತ್ತಲಿವೆ ಮತ್ತು ಗೂಗಲ್ ಕ್ಲಾಸ್ ರೂಮ್ ಪರಿಕಲ್ಪನೆ ಮತ್ತು ಅನೇಕ ನೇರ ಪ್ರಸಾರದಲ್ಲಿ ಅಂತರಜಾಲ ಆಧಾರಿತ ಡಿಜಿಟಲ್ ಕ್ಲಾಸ್ ರೂಮ್‌ಗಳನ್ನು ಇಂದಿನ ಶಿಕ್ಷಣದ ಒಂದು ಉದ್ದೇಶಕ್ಕಾಗಿ

ಬಳಸಿಕೊಳ್ಳಲಾಗುತ್ತಿದೆ. ಆದ್ದರಿಂದ ಪ್ರಸ್ತುತ ಈ ತರಹದ ವಿಷಯಗಳನ್ನು ಸಂಶೋಧನಾ ಅಧ್ಯಯನಗಳ ಮೂಲಕ ಅಧ್ಯಯನ ಮಾಡಲಾಗುತ್ತಿದೆ.

**ಸಂಶೋಧನಾ ಅಧ್ಯಯನದ ವಿಶ್ಲೇಷಣೆ : ಡಿಜಿಟಲ್ ಶಿಕ್ಷಣದ ಪ್ರವೃತ್ತಿಗಳು :** ಸಾಮಾಜಿಕ ಮಾಧ್ಯಮದ ಕಲಿಕೆಯ ಸಾಧನವಾಗಿ ದೊಡ್ಡ ಮಟ್ಟದಲ್ಲಿ ಪ್ರಗತಿ ಸಾಧಿಸಿದೆ. ಇಂದು ಅನೇಕ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಾಮಾಜಿಕ ಮಾಧ್ಯಮವಾದ ಇ-ಕಲಿಕೆಯನ್ನು ತಮ್ಮ ಅವಿಭಾಜ್ಯ ಅಂಗವಾಗಿ ಬಳಸುತ್ತಿದ್ದಾರೆ. ಪ್ರಮುಖ ವಿಷಯಗಳ ಬಗ್ಗೆ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲು ಪ್ರಮುಖ ವೇದಿಕೆಯಾಗಿದೆ. ಎಲ್ಲಿಯಾದರೂ ಯಾವ ಸಮಯದಲ್ಲಾದರೂ ಮಾಹಿತಿಯನ್ನು ಹಂಚಿಕೊಳ್ಳಲು ಸಾಧ್ಯವಾಗುದರ ಜೊತೆಗೆ ಸಾಮಾಜಿಕ ಚಟುವಟಿಕೆಗಳ ಮತ್ತು ಚಟುವಟಿಕೆಗಳ ವೆಚ್ಚ ಪರಿಣಾಮಕಾರಿ ಆಧಾರದ ಮೇಲೆ ನಿರ್ಮಿಸಲು ನೆಟ್‌ವರ್ಕಿಂಗ್ ಅವಕಾಶಗಳನ್ನು ಸೃಷ್ಟಿಸುವ ಅತ್ಯುತ್ತಮ ಮೂಲವಾಗಿದೆ.

**ಸಂವಾದಾತ್ಮಕ ಕಲಿಕಾ ಸಂಪನ್ಮೂಲಗಳು :** ಸ್ಮಾರ್ಟ್ ತರಗತಿ ಕೊಠಡಿಗಳು ಮೊಬೈಲ್ ಅಪ್ಲಿಕೇಶನ್‌ಗಳು ಮುಂತಾದ ಸಂವಾದಾತ್ಮಕ ಸಾಧನಗಳ ಆಗಮನದೊಂದಿಗೆ ಕಲಿಕೆಗೆ ಇನ್ನು ಮುಂದೆ ಸ್ಥಾಪಿಸವಾದ ಸಾಂಪ್ರದಾಯಿಕ ತರಗತಿಗೆ ಸೀಮಿತವಾಗಿಲ್ಲ. ಈ ನವೀನ ಡಿಜಿಟಲ್ ಸಾಧನಗಳೊಂದಿಗೆ ಸಹಸ್ರ ವರ್ಷಗಳ ಕಲಿಕೆಯ ಪ್ರಕ್ರಿಯೆಯನ್ನು ಮರು ರೂಪ ಮಾಡಲಾಗಿತ್ತಿದೆ. ಅತ್ಯುತ್ತಮ ಶಿಕ್ಷಣವನ್ನು ಬಳಸಿಕೊಂಡು ವಿವಿಧ ಶಿಕ್ಷಣತಜ್ಞರು ಸಂವಾದಾತ್ಮಕ ಕಲಿಕೆ ಮಾದರಿಗಳೊಂದಿಗೆ ಶಿಕ್ಷಣವನ್ನು ಪಡೆಯಲು ಬರುತ್ತಿದಾರೆ. ಸಹಯೋಗಿ ತಂತ್ರಜ್ಞಾನಗಳೊಂದಿಗೆ ಸಂಯೋಜಿತ ಕಲಿಕೆಯನ್ನು ಹೆಚ್ಚಿಸಲಾಗುತ್ತಿದೆ. ಒಂದು ಸ್ಥಳದಲ್ಲಿ ಕುಳಿತು ಕಾರ್ಯಯೋಜನೆಗಳೊಂದಿಗೆ ಕೆಲಸ ಮಾಡಲು ಜನರಿಗೆ ಮತ್ತು ಇತರರೊಂದಿಗೆ ಸಹಕರಿಸಲು ಸಹಾಯಕವಾಗಿದೆ. ಡಿಜಿಟಲ್ ತಂತ್ರಜ್ಞಾನವು ಕೇವಲ ಬೋಧ್ನಾ ವ್ಯಾಪ್ತಿಗೆ ಅಥವಾ ಸ್ಥಳಕ್ಕೆ ಸೀಮಿತವಾಗಿಲ್ಲ ಆದರೆ ಇದು ಇನ್ನು ಮುಂದೆ ಪ್ರಾದೇಶಿಕ ವ್ಯವಹಾರವಲ್ಲ ಆದರೆ ಜಾಗತಿಕ ಬೆಳವಣಿಗೆಗಳನ್ನು ಅನುಸರಿಸುತ್ತದೆ. ವಾಸ್ತವವಾಗಿ ಶಿಕ್ಷಣ ಸಂಸ್ಥೆಗಳು ಡಿಜಿಟಲ್ ಶಿಕ್ಷಣವನ್ನು ನೀಡುವುದು ಅವರ ದೀರ್ಘಕಾಲೀನ ಉಳಿವು ಮತ್ತು ಬೆಳವಣಿಗೆಗೆ ನಿರ್ಣಾಯಕ ಎಂದು ನಂಬುತ್ತಾರೆ.

**ಬೃಹತ್ ಮುಕ್ತ ಆನ್‌ಲೈನ್ ಕೋರ್ಸ್‌ಗಳು (ಒಡಿಊ):**

ಒಡಿಊಗಳ ಪ್ಲಾಟ್‌ಫಾರ್ಮ್‌ಗಳು ಸ್ವಯಂ-ಕಲಿಕೆಯನ್ನು ನಿರ್ಣಾಯಕ ರೀತಿಯಲ್ಲಿ ಸಕ್ರಿಯಗೊಳಿಸುತ್ತಿವೆ. ಭಾರತದಲ್ಲಿ ಒಡಿಊ ಕಾರ್ಯಕ್ರಮಗಳ ಮೂಲಕ ಆನ್‌ಲೈನ್ ಕೋರ್ಸ್‌ಗಳ ಜನಪ್ರಿಯವಾಗಿ ಬೆಳೆಯುತ್ತಿರುವ ಮಾರುಕಟ್ಟೆಯಾಗಿದೆ. ಒಡಿಊಗಳು ದೇಶದ ಸಾಕಷ್ಟು ಯುವ ಜನಸಂಖ್ಯೆಗೆ ತಮ್ಮ ಅರ್ಹತೆಗಳು ಮತ್ತು ಕೌಶಲ್ಯಗಳನ್ನು ನವೀಕರಿಸಲು ಸಹಾಯ ಮಾಡುತ್ತಿವೆ. ಕೈಗೆಟುಕುವ ಶಿಕ್ಷಣಕ್ಕೆ ಪ್ರವೇಶವಿಲ್ಲದ ಲಕ್ಷಾಂತರ ಭಾರತೀಯರಿಗೆ ಕೌಶಲ್ಯ ಆಧಾರಿತ ಕೋರ್ಸಗಳ ಪ್ರವೇಶವನ್ನು ಪಡೆಯುವ ಮೂಲಕ ತಮ್ಮ ಉದ್ಯೋಗ ಸಾಮರ್ಥ್ಯವನ್ನು ಸುಧಾರಿಸಲು ಇದು ಅನುವು ಮಾಡಿಕೊಡುತ್ತದೆ. ಒಡಿಊಗಳ ಕಲಿಕೆ ವಿದ್ಯಾರ್ಥಿಗಳು ಮತ್ತು ಕೆಲಸ ಮಾಡುವ ವೃತ್ತಿಪರರಿಗೆ ಎಲ್ಲಿಂದಲಾದರೂ ಮತ್ತು ಯಾವುದೇ ಸಮಯದಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ಅಧ್ಯಯನ ಮಾಡಲು ಸಹಾಯಕವಾಗುತ್ತಿದೆ.

ಡಿಜಿಟಲ್ ಮಾಧ್ಯಮಗಳ ಮೂಲಕ ನೀಡುವ ಆನ್‌ಲೈನ್ ಕೋರ್ಸ್‌ಗಳಿಗೆ ಭಾರತವು ದೊಡ್ಡ ಮಾರುಕಟ್ಟೆಯಾಗಿದೆ ಎಂದು ಬೆಳೆಯುತ್ತಿರುವ ಪ್ರವೃತ್ತಿಗಳು ಸೂಚಿಸುತ್ತವೆ. ವೃತ್ತಿಪರ ಕೋರ್ಸ್‌ಗಳಿಗೆ ದಾಖಲಾದ ವಿದ್ಯಾರ್ಥಿಗಳಲ್ಲಿ ಮತ್ತು ಕಾರ್ಯನಿರತ ಕಾರ್ಯ ನಿರ್ವಾಹಕರಲ್ಲಿ ತಮ್ಮ ಕೌಶಲ್ಯವನ್ನು ನಿರ್ದಿಷ್ಟ ಕ್ಷೇತ್ರಗಳಲ್ಲಿ ಉದಯೋನ್ಮುಖ ವೃತ್ತಿಜೀವನದ ಅವಕಾಶಗಳನ್ನು ಸ್ಪರ್ಧಿಸಲು ಮುಂದುವರಿಸಬೇಕೆಂದು ಆಸೆ ಹೆಚ್ಚುತ್ತಿದೆ. ಅಂತಹ ಜನರಿಗೆ ಒಡಿಊಗಳು ಯಶಸ್ವಿ ಪ್ರವೃತ್ತಿಯಾಗಿದೆ.

**ದೃಶ್ಯ ಆಧಾರಿತ ಕಲಿಕಾ ಪರಿಕರಗಳಲ್ಲಿ ಅಭಿವೃದ್ಧಿ :**

ಆಡಿಯೋ ವಿಡಿಯೋ ಆಧಾರಿತ ಕಲಿಕೆ ಭಾರತದಲ್ಲಿ ವೇಗವನ್ನು ಹೆಚ್ಚಿಸುತ್ತಿದೆ. ವೀಡಿಯೋ ಆಧಾರಿತ ಬೋಧನಾ ಕಲಿಕೆ ಶಾಲೆಗೆ ಹೋಗುವವರಲ್ಲಿ ಬಹಳ ಜನಪ್ರಿಯವಾಗಿದೆ. ಏಕೆಂದರೆ ಇದು ಕಲಿಕೆಯನ್ನು ಮೋಜಿನೊಂದಿಗೆ ಸಂಯೋಜಿಸುತ್ತದೆ. ಬೋಧನೆ ಮತ್ತು ಕಲಿಕೆಗೆ ಇಂತಹ ಮಾಧ್ಯಮವು ಹೆಚ್ಚು ಸಂವಾದಾತ್ಮಕವಾಗಿರುತ್ತದೆ. ಈ ರೀತಿಯ ಬೋಧನಾ ವಿಧಾನವು ಕೇವಲ ಆಡಿಯೊ ವಿಡಿಯೋಗೆ ಸೀಮಿತವಾಗಿಲ್ಲ ಆದರೆ ಶೈಕ್ಷಣಿಕ ಅಪ್ಲಿಕೇಶ್‌ಗಳು, ಪಾಡ್‌ಕಾಸ್ಟಗಳು, ಇ-ಪುಸ್ತಕಗಳು ಇತ್ಯಾದಿಗಳನ್ನು ಸಹ ಒಳಗೊಂಡಿದೆ. ಈ ಡಿಜಿಟಲ್ ಮಾಧ್ಯಮಗಳನ್ನು ಬಳಸಿಕೊಂಡು ಮಕ್ಕಳು ಹೊಸ ರೀತಿಯ ಶಿಕ್ಷಣವನ್ನು ಕಲಿಯಲು ಬಹಳ ಉತ್ಸುಕರಾಗಿದ್ದಾರೆ.

**ಅಂತರ ಸಂವಹನ ತಂತ್ರಾಂಶಗಳ ಗೇಮ್ ಆಧಾರಿತ ಕಲಿಕೆ:** ಇದು ಈಗಾಗಲೇ ಕಲಿಯುವವರು ತಮ್ಮನ್ನು ತಾವು ಆಕರ್ಷಕವಾಗಿ ಕಲಿಸುವ ವಿಷಯಗಳೊಂದಿಗೆ ಸುಲಭವಾಗಿ ಸಂಬಂಧ ಹೊಂದುವಂತಹ ವಾತಾವರಣವನ್ನು ಸೃಷ್ಟಿಸುತ್ತಿದೆ. ಅಂತರ ಸಂವಹನ ತಂತ್ರಾಂಶಗಳು ಹಲವಾರು ವಲಯಗಳನ್ನು ಪರಿವರ್ತಿಸುವುದರಿಂದ, ಆಟದ ಆಧಾರಿತ ಕಲಿಕೆ ನಿಸ್ಸಂದೇಹವಾಗಿ ಶಿಕ್ಷಣ ಪ್ರಪಂಚದ ಉತ್ಪನ್ನಗಳಲ್ಲಿ ಕ್ರಾಂತಿಯನ್ನುಂಟು ಮಾಡುತ್ತದೆ ಮತ್ತು ಭವಿಷ್ಯದ ಉತ್ತಮ ಸ್ವಯಂ ತರಬೇತಿ ಪಡೆದ ಉದ್ಯೋಗಿಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

**ಶಿಕ್ಷಣದಲ್ಲಿ ಡಿಜಿಟಲ್ ತಂತ್ರಜ್ಞಾನದ ಕ್ರಾಂತಿ :**

ಅಂತರಜಾಲವು ಕೈಗೆಟುಕವುದರಿಂದ ಪ್ರತಿಯೊಬ್ಬರು ಪ್ರವೇಶಿಸಬಹುದಾಗಿದೆ. ಡಿಜಿಟಲ್ ಮತ್ತು ಸಾಂಪ್ರಾದಾಯಿಕ ಬೋಧನೆ ಕಲಿಕೆಯ ಮಾಧ್ಯಮಗಳ ಹೆಚ್ಚಿನ ಒಮ್ಮುಖವಾಗಲಿದೆ. ಶಿಕ್ಷಣ ಉದ್ಯಮವು ಸಣ್ಣ ಮಾಧ್ಯಮ ಮತ್ತು ದೊಡ್ಡ ಪ್ರಮಾಣದ ಎಜುಟೆಕ್ ಸ್ಟಾರ್ಟ್ ಆಪ್‌ಗಳ ಪ್ರಸರಣಕ್ಕೆ ಸಾಕ್ಷಿಯಾಗಲಿದ್ದು ಮುಂದಿನ ದಿನಗಳಲ್ಲಿ ಡಿಜಿಟಲ್ ತಂತ್ರಜ್ಞಾನವು ಶೈಕ್ಷಣಿಕ ಸಂಸ್ಥೆಗಳಿಗೆ ವಿವಿಧ ನವೀನ ಡಿಜಿಟಲ್ ಉತ್ಪನ್ನಗಳನ್ನು ನೀಡಲಿದೆ.

ದೇಶದ ಡಿಜಿಟಲ್ ಶಿಕ್ಷಣ ಮಾರುಕಟ್ಟೆಯನ್ನು ಹೆಚ್ಚಿಸಲು ಸಹಾಯ ಮಾಡುವ ನೀತಿಗಳನ್ನು ತರಲು ಸರ್ಕಾರ ಆಮೂಲಾಗ್ರ ಕ್ರಮಗಳನ್ನು ತೆಗೆದುಕೊಳ್ಳತ್ತಿದೆ. ನವೀನ ಶೈಕ್ಷಣಿಕ ಸಾಧನಗಳ ಬಳಕೆಯನ್ನು ಸುಲಭಗೊಳಿಸಲು ದೇಶಾದ್ಯಂತ ಡಿಜಿಟಲ್ ಮೂಲಸೌಕರ್ಯಗಳ ಗುಣಮಟ್ಟವನ್ನು ಸುಧಾರಿಸಲು ಪ್ರಯತ್ನ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಇತರ ಎಲ್ಲಾ ವೃತ್ತಿಗಳಂತೆ ಡಿಜಿಟಲ್ ಶಿಕ್ಷಣವು

ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ಶಿಕ್ಷಣವನ್ನು ನೀಡುವ ವಿಧಾನದಲ್ಲಿ ಗಮನಾರ್ಹ ಬದಲಾವಣೆಗಳನ್ನು ಕಾಣುತ್ತವೆ. ಈ ದೇಶದ ಯುವಜನರನ್ನು ಸಬಲೀಕರಣಗೊಳಸಲು ಡಿಜಿಟಲ್ ಶಿಕ್ಷಣದಿಂದ ಹೊರಹೊಮ್ಮುವ ಅಸಂಖ್ಯಾತ ಸಾಧ್ಯತೆಗಳನ್ನು ನಾವು ವೀಕ್ಷಿಸಬಹುದು.

**ಆಧುನಿಕ ಕಲಿಕಾ ನಿರ್ವಹಣಾ ಪದ್ಧತಿ :**

(ಅಡ್ವಾನ್ಸ್ ಲರ್ನಿಂಗ್ ಮ್ಯಾನೇಜ್ಮೆಂಟ್ ಸಿಸ್ಟಮ್) (ಎಲ್ಎಂಎಸ್) ತನ್ನ ಸರಿಯಾದ ಜ್ಞಾನ ನಿರ್ವಹಣಾ ಸಾಧನಗಳೊಂದಿಗೆ ಭಾರತದ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ನೀಡುತ್ತಿರುವ ಶೈಕ್ಷಣಿಕ ಕೋರ್ಸ್‌ಗಳ ವಿನ್ಯಾಸ ಮತ್ತು ವಿತರಣೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಎಲ್ಲಾ ತಂತ್ರಜ್ಞಾನದ ಅಡೆತಡೆಗಳನ್ನು ನಿವಾರಿಸಲು ಡಿಜಿಟಲ್ ತಂತ್ರಜ್ಞಾನವು ಸಹ ಸಹಾಯ ಮಾಡುತ್ತಿದೆ. ಈಗ ಕಲಿಕಾ ಸಾಮಗ್ರಿಯನ್ನು ಡಿಜಿಟಲ್ ಭಾಷೆಗಳಲ್ಲಿ ಲಭ್ಯವಿದೆ.

ಆನ್‌ಲೈನ್ ಶಿಕ್ಷಣವು ಕಲಿಕೆ, ಬೋಧನೆ ಮತ್ತು ಸಂಶೋಧನಾ ಅಧ್ಯಯನಗಳಿಗಾಗಿ ಉಚಿತವಾಗಿ ಪ್ರವೇಶಿಸಬಹುದು. ಇದು ಅಂತರ್ಜಾಲದಲ್ಲಿ ಮುಕ್ತವಾಗಿ ಲಭ್ಯವಿರುವ ವ್ಯಾಪಕವಾದ ಅಧ್ಯಯನ ಸಾಮಗ್ರಿಗಳೊಂದಿಗೆ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡುತ್ತದೆ. ಹೀಗಾಗಿ ಸ್ವಯಂ ಕಲಿಕೆಯ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ. ಡಿಜಿಟಲ್ ಶಿಕ್ಷಣವು ಇಂದಿನ ಯುವಕರನ್ನು ಡಿಜಿಟಲ್ ಕಾಂತ್ರಿಯ ಮೂಲಕ ವಿದ್ಯಾರ್ಥಿಗಳಿಗೆ ಮುಕ್ತವಾಗಿ ಜ್ಞಾನವನ್ನು ಮತ್ತು ಮಾಹಿತಿಗಳನ್ನು ನೀಡುತ್ತಿದೆ.

**ಶಿಕ್ಷಣದಲ್ಲಿ ಡಿಜಿಟಲ್ ಮಾಧ್ಯಮದ ಪಾತ್ರ :**

ಡಿಜಿಟಲ್ ಮಾಧ್ಯಮವು ಇ-ಮೇಲ್, ವಿಡಿಯೋ, ವೆಬ್‌ಸೈಟ್‌ಗಳು, ಫೋಟೋಗಳು ಮತ್ತು ಸ್ಲೈಡ್‌ಶೋಗಳಂತಹ ಹಲವಾರು ವಿಭಿನ್ನರೂಪಗಳನ್ನು ಪಡೆಯುತ್ತದೆ. ಅಲಿಸನ್ ಕುಕ್ ಸ್ಯಾಥರ್ ನಡೆಸಿದ ಅಧ್ಯಯನದಲ್ಲಿ ವಿದ್ಯಾರ್ಥಿಗಳು ಇ-ಮೇಲ್ ಮೂಲಕ ಸಂವಹನ ನಡೆಸಲು ಹೆಚ್ಚು ಆರಾಮದಾಯಕವಾಗಿದ್ದಾರೆ ಎಂದು ಅವರು ಹೇಳಿದ್ದಾರೆ. ತರಗತಿಯ ಹೊರಗೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಂದಿಗೆ ನೇರ ಸಂವಹನವನ್ನು ಇ-ಮೇಲ್‌ಗಳು ಅನುಮತಿಸುತ್ತವೆ. ವಿದ್ಯಾರ್ಥಿಗಳು ತಮ್ಮ ಉಪನ್ಯಾಸಕರೊಂದಿಗೆ ಯಾವುದೇ ಸಮಯದಲ್ಲಿ ಸಮಸ್ಯೆಗಳು ಅಥವಾ ಪ್ರಶ್ನೆಗಳ ಕುರಿತು ಸರಳವಾಗಿ ಸಂವಹನ ಮತ್ತು ಸಂವಾದ ನೆಡಸಬಹುದು. ಇದು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ತರಗತಿಯಿಂದ ಹೊರಗೆ ಸಂವಹನ ತಂತ್ರಗಳನ್ನು ಮುನ್ನಡೆಸಲು ಅನುವು ಮಾಡಿಕೊಡುತ್ತದೆ. ದೃಶ್ಯ ಪ್ರಸ್ತುತುಗಳ ಮೂಲಕ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ತಮ್ಮ ಮಾಹಿತಿಯನ್ನು ವಿಡಿಯೋ ಮತ್ತು ಫೋಟೋ ಮೂಲಕ ತಮ್ಮ ವಿಷಯವನ್ನು ಪ್ರದರ್ಶಿಸುವ ಮೂಲಕ ತರಗತಿಯಲ್ಲಿ ದೃಶ್ಯ ಕಲಿಕೆ ಪ್ರಮುಖ ಸಾಧನವಾಗಿದೆ.

**ಶಿಕ್ಷಣದಲ್ಲಿ ಡಿಜಿಟಲ್ ಮಾಧ್ಯಮದ ಪ್ರಯೋಜನಗಳು ಮತ್ತು ಪರಿಣಾಮಗಳು :**

ಶಿಕ್ಷಣದಲ್ಲಿ ಡಿಜಿಟಲ್ ಮಾಧ್ಯಮದ ಮುಖ್ಯ ಪ್ರಯೋಜನವೆಂದರೆ ಇದು ವಿದ್ಯಾರ್ಥಿಗಳಿಗೆ ಅಧ್ಯಯನದ ಮಾಹಿತಿ ಮತ್ತು ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಕೆಲವೊಂದು ವಿಷಯ ವಿದ್ಯಾರ್ಥಿಗಳಿಗೆ ಅರ್ಥಮಾಡಿಕೊಳ್ಳಲಾಗದಂತಹ ಸಂದರ್ಭದಲ್ಲಿ ಸಹಾಯಕ ವಿಷಯಗಳನ್ನು ತೋರಿಸಲು ಡಿಜಿಟಲ್ ಸೂಚನೆಯು ಸಹಾಯ ಮಾಡುತ್ತದೆ. ವಿದ್ಯಾರ್ಥಿಗಳು ಡಿಜಿಟಲ್ ತಂತ್ರಜ್ಞಾನವನ್ನು ಬಳಸುವುದರಿಂದ ಕೌಶಲ್ಯಗಳನ್ನು ಅಭಿವೃದ್ಧಿಗೊಳಸಲು ಸಹಾಯಕವಾಗಿದೆ'. ಶಿಕ್ಷಣದಲ್ಲಿ ಡಿಜಿಟಲ್ ಮಾಧ್ಯಮದ ಮುಖ್ಯ ಪರಿಣಾಮಗಳೆಂದರೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಪರಸ್ಪರ ಗೌರವ ಮತ್ತು ಪರಸ್ಪರ ಸಂಬಂಧದ ಆಧಾರದ ಮೇಲೆ ಸಂವಾದದಲ್ಲಿ ತೊಡಗಿಸಿಕೊಳ್ಳಲು ಈ ವೇದಿಕೆ ಎಲ್ಲಾ ಬೋಧನೆ ಮತ್ತು ಕಲಿಕೆಯ ಅಡಿಪಾಯದಲ್ಲಿ ಮೂಲಭೂತ ಮಾನವನ ಸಂಬಂಧದ ಆಧಾರದ ಮೇಲೆ ವಾಸ್ತವದ ನಡುವೆ ಸಂಬಂಧವಿದೆ.

**ಸಾರಾಂಶ :**

ನಾವು ಡಿಜಿಟಲ್ ಯುಗದಲ್ಲಿ ಜೀವಿಸುತ್ತಿರುವಾಗ ಡಿಜಿಟಲ್ ಮಾಧ್ಯಮ ಮತ್ತು ತಂತ್ರಜ್ಞಾನದ ಉತ್ತಮ ಬಳಕೆಯಲ್ಲಿ ವಿದ್ಯಾರ್ಥಿಗಳನ್ನು ಬೆಂಬಲಿಸುವ ನವೀನ ಶೈಕ್ಷಣಿಕ ವಿಧಾನಗಳನ್ನು ಪರಿಶೀಲಿಸುವುದು ಮತ್ತು ವಿನ್ಯಾಸಗೊಳಸುವುದು ಶಿಕ್ಷಕರ ಕಾರ್ಯವಾಗಿದೆ. ವಾಸ್ತವವಾಗಿ ಇದು ಹೆಚ್ಚಿನ ಪರಿಗಣನೆಯ ಕಲ್ಪನೆಯಲ್ಲಿ ಅತ್ಯುನ್ನತ ಮತ್ತು ತುರ್ತು ಪ್ರಾಮುಖ್ಯತೆಯ ಅವಶ್ಯಕತೆಯಾಗಿದೆ. ಮೇಲಾಗಿ ನಮ್ಮ ಶಿಕ್ಷಣ ತಜ್ಞರ ನಂಬಿಕೆಗಳು ಮತ್ತು ಕ್ರಿಯೆಗಳನ್ನು ಮಾರ್ಗದರ್ಶಿಸುವ ಚೌಕಟ್ಟು ಮುಖ್ಯವಾಗಿದೆ ಏಕೆಂದರೆ ಈ ಚೌಕಟ್ಟು ಕಾರ್ಯಗತಗೊಳಸಲಾದ ಡಿಜಿಟಲ್ ಮಾಧ್ಯಮದ ಕಾರ್ಯಕ್ರಮಗಳ ಶೈಲಿಯನ್ನು ಮಾರ್ಗದರ್ಶನ ಮಾಡುತ್ತದೆ ಜೊತೆಗೆ ಅವರ ಸಾಕ್ಷಾತ್ಕಾರದಿಂದ ಹೊರಹೊಮ್ಮುವ ಹೊಸ ರೀತಿಯ ಕಲಿಕೆಯ ಸಂಸ್ಕೃತಿಗಳನ್ನು ಮಾರ್ಗದರ್ಶನ ಮಾಡುತ್ತದೆ. ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸುವವರಾಗಲು ಮತ್ತು ತಮ್ಮದೇ ಆದ ಗುರುತು ಮತ್ತು ಸೃಜನಶೀಲತೆಯ ಲೇಖಕರಾಗಲು ಸಹಾಯ ಮಾಡುವುದನ್ನು ಮುಂದುವರಿಸಲು ಸಹಾಯ ಮಾಡುತ್ತದೆ. ಹಾಗೂ ಕಲಿಕೆಯ ಕ್ರಿಯೆಯು ಹೊಸ ಸಾಕ್ಷರತೆಯ ಜೊತೆಗೆ ಸಮಾಜದ ತಿಳುವಳಿಕೆಯ ಜೊತೆಗೆ ಪ್ರತಿಬಿಂಬಿಸುವ ಮತ್ತು ತೊಡಗಿಸಿಕೊಂಡಿರುವ ಸದಸ್ಯರನ್ನು ಅಭಿವೃದ್ಧಿಪಡಿಸಬೇಕು ಇದು ಆಧುನಿಕ ನಾಗರಿಕನಾಗಲು ಅವಶ್ಯಕವಾಗಿದೆ.

**ಗ್ರಂಥಋಣಗಳು :**


೧. ↄಣಣಠಿ://ತಿತಿತಿ.ಡಿಛಿಜಚಿಡಿಛಿಚಿಣಜಟಿಜಾ:ಟಿಟಿತಿ ಜಿಟಾಚಿಟ ಟಜಚಿ ಚಿಟಿಜ ಖಿಟಿಣಜಡಿಟಿಜಾ ಣಡಿಚಿಟಿಜಿಜಿಟಿಟಿಂ ಜಜಣಿಛಿಚಿಣಾಟಿ ಇಜಣಿಛಿಚಿಣಾಟಿಚಿಟ ಣಜಛಿಟಿಟಿಟಿಟಿಥಿ– ಈಡಿಟಿ ಫಟಿಟಿಜಿಜಚಿ, ಣುಜ ಜಿಡಿಜಜ ಜಟಿಛಿಥಿಛಿಟಿಟಿಜಿಜಚಿ ↄಣಣಠಿ://ಜಟಿ.ತಿಟಿಟಿಜಿಜಚಿ.ಟಿಡಿ/ತಿಟಿಟಿ/ಇಜಣಿಛಿಚಿಣಾಟಿಚಿಟ_ಣಜಛಿಟಿಟಿಟಿಟಿಥಿ ಉಟಜಟಿಂ – ಖಟಿತಿಜಿ, ಅ.ಇ. (೨೦೦೬)
೨. ಖಜಛಿಟಿಟಿಟಿಟಿಥಿ ಚಿಟಿಜ ಆಟಾಚಿಟ ಒಜಜಚಿ ಟಿ ಣುಜ ಅಟಚ್ಚಿಡಿಟಿಟಿ ೦ ಉಣಾಜಜ ಜಿಟಿ ಇಜಣಿಛಿಚಿಣಾಟಿ (೨೦೨೧)
೩. ಊಣಟಿಣಟಿಟಿಡಿಟಿ , ಊಜಜ (೨೦೧೧). ಆಟಾಚಿಟ ಒಜಜಚಿ ಟಿ ಜಜಣಿಛಿಚಿಣಾಟಿ : ಇಥಿಟಿಚಿಟಿಜಟಿಂ ಣುಜ ಖಜಛಿಟಿಟಿಟಿಟಿಥಿ ೦ಛಿಛಿಜಿಣಚಿಟಿಛಿಜ ಒಟಿಜಜ : ಖಟಿಛಿಜಾಜಿ ಟಿಣಟಿಟಿಟಾಜ ಟಿಜಿ ಣಜಛಿಟಿಟಿಟಿಟಿಥಿ ಗಿಚಿ ಅಟಿಜಿಟಿ ಕಿಣಜಾ.

೪. ಃಜಷಿ, ಒ (೨೦೧೦).ಃಜಥಿಡಿಜ ಛಿಡಿಣಾಜಡಿ ಟಿಾಜಡಿಚಿಥಿಥಿ : ಇಒಳಿಡಿಣ ಥಿಡಿಚಿ ಖಿಡಿಟಿಜ ಜಜಚಿಠಿಟಿಜ ಟಿಡಿಡಿಚಿ ಣಜಚಿಟಿಡಿ .

೫. ಊಾಡಿಥಿ ಖ. ಚಿಟಿಜ ಎಜಿಜ ೦.(೨೦೦೯) ಖಿಜ ಆಟಿಣ, ಆಜಿಟಿಣ, ಚಿಟಿಜ ಈಣಾಣಿಜ ಡಿ ಒಜಚಿ ಖಿಾಜಡಿಚಿಥಿಥಿ ಇಜಣಾಚಿಣಿಡಿ. ಖಿಜ ಎಡಾಡಿಟಿಚಿಟ ಡಿ ಒಜಚಿ ಖಿಾಜಡಿಚಿಥಿಥಿ ಇಜಣಾಚಿಣಿಡಿ.

೬. ಃಡಿಣಾಇಾಟಚಿಟ , ೦ : ಖಿಜ ಜಿಣಾಣಿಜ ಡಿ ಇ-ಟಜಚಿಡಿಟಿಂ ಅಡಿಟಾಡಿಾಜ ಅಡಿಟಾಡಿಚಿಣಿಡಿ ಡಿ ಣಜ ೦ಅಒ,೪೫(೪) ೬೦-೬೩ (೨೦೦೨)

೭. ಈಡಿಜಜಟಚಿಟ ಐ . ಫ & ಈಡಿಜಜಟಚಿಟ ಊ.ಊ ಣಿಂ ಥಿಚಿಟ ಒಜಚಿ ಖಿಜಚಿಟಿಡಿಡಿಚಿ ಣಿ ಇಟಿಚಿಟಿಜ ಡಿಟಿಜ ಐಜಚಿಡಿಟಿಂ. ಖಿಡಾಡಿಟಚಿಟ ಡಿ ಇಜಣಾಣಡಿ ಡಿಟಿಜ(೨೦೧೩)

೮. ಎ ಒಟಿಚಿಟ ಖಿಜಿಣಡಿ : ಜಿಡಾಜಚಿಣಿ ಡಿ ಜಣಾಚಿಣಿಚಿಟ ಣಜಚಿಟಿಡಿಡಿ (೨೦೧೩)

೯. ಃಜಇಾಜಡಿ, ಊ. : ಣಜಚಿಥಿಂ ತಿಾ ಚಿಟಿಜ ಚಿಥಿಾ ಛಿಡಿಣಾಜಡಿ ಃ ಜಡಿಜಚಿಡಿಥಿ ಥಿಡಿ. (೧೯೯೩)

**Benefits to publish in Shikshan Sanshodhan:**

- Shikshan Sanshodhan is an Open-Access, Peer reviewed, Indexed, Referred International Journal with wide scope of publication.
- Author Research Guidelines & Support.
- Platform to researchers and scholars of different study field and subject.
- Prestigious Editorials from different Institutes of the world.
- Communication of authors to get the manuscript status time to time.
- Full text of all articles in the form of PDF format and Digital Object Identification DOIs.
- Individual copy of "Certificate of Publication" to all Authors.
- Indexing of journal in all major online journal databases like Google Scholar, Academia, Scribd, SSRN and Internet Archive.
- Open Access Journal Database for High visibility and promotion of your article with keyword and abstract.
- Organize Conference, Seminar and publish its papers with ISSN.
- Conference, Seminar - Special Issue / Proceedings Publication.


## Published By

Research Culture Society & Publication

**RESEARCH CULTURE SOCIETY & PUBLICATION**

**Email: shikshansanshodhan@gmail.com**

**Web Email: editor@ijrcs.org**

**http://shikshansanshodhan.researchculturesociety.org/**